ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಜೂನ್ 23, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 40 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

LONG TERM FOR NEET & IIT 2024
CLASSES COMMENCE FROM 3 JULY 2023
DR. THIMMAREDDY NEET ACADEMY
LIC COLONY, BIET VIDYANAGAR ROAD, DAVANGERE
9900055536, 9900077734 & 9964636810

BEST TUITION CLASSES
STATE, CBSE & ICSE
FROM LKG TO GRADE X
CLASSES COMMENCE FROM 3 JULY 2023
SMT SRIDEVI THIMMAREDDY INTERNATIONAL PUBLIC SCHOOL
DEVARABELAKERE ROAD, SHAMANUR, DAVANGERE
9900077729, 9448233498 & 9036019423

## ವಿಕೋಪ ನಿರ್ವಹಣೆಯ ಸಂಪುಟ ಉಪ ಸಮಿತಿಗೆ ಎಸ್ಸೆಸ್ಸೆಂ



ಬೆಂಗಳೂರು, ಜೂ. 22 - ರಾಜ್ಯದಲ್ಲಿನ ಬರ, ಪ್ರವಾಹ ವಿಪತ್ತು ನೈಸರ್ಗಿಕ ವಿಕೋಪ ನಿರ್ವಹಣೆಗೆ ಸಚಿವ ಕೃಷ್ಣ ಭೈರೇಗೌಡ ಅಧ್ಯಕ್ಷತೆಯಲ್ಲಿ 6 ಸಚಿವರ ಸಂಪುಟ ಉಪಸಮಿತಿಯನ್ನು ರಾಜ್ಯ ಸರ್ಕಾರ ರಚನೆ ಮಾಡಿದೆ.

ಈ ಸಮಿತಿಯಲ್ಲಿ ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಎನ್.ಚಲುವರಾಯಸ್ವಾಮಿ, ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಕೆ.ಎನ್.ರಾಜಣ್ಣ ಸದಸ್ಯರಾಗಿದ್ದಾರೆ. ವಿಪತ್ತು ಪರಿಸ್ಥಿತಿ ಪರಾಮರ್ಶಿಸಿ ಅಗತ್ಯ ಸೂಚನೆ ನೀಡಲು ಹಾಗೂ ನೀತಿ ನಿರೂಪಣೆ ಮಾಡಲು ಸಚಿವ ಸಂಪುಟ ಉಪ ಸಮಿತಿಗೆ ಜವಾಬ್ದಾರಿ ನೀಡಲಾಗಿದೆ.

## ವಿದ್ಯುತ್ ದರ ಹೆಚ್ಚಳ : ಉದ್ಯಮಿಗಳ ಜೊತೆ ಇಂದು ಮುಖ್ಯಮಂತ್ರಿ ಸಭೆ



ಬೆಂಗಳೂರು, ಜೂ.22 - ವಿದ್ಯುತ್ ದರ ಹೆಚ್ಚಳಕ್ಕೆ ವಿರೋಧ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕೈಗಾರಿಕೋದ್ಯಮಿ ಗಳ ಸಭೆಯನ್ನು ನಾಳೆ ಶುಕ್ರವಾರ ಕರೆಯಲಾಗಿದೆ ಎಂದು ಸಣ್ಣ ಕೈಗಾರಿಕಾ ಸಚಿವ ಶರಣ ಬಸಪ್ಪ ದರ್ಶನಾಪುರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಭೆಯಲ್ಲಿ ಕೈಗಾರಿಕೋದ್ಯಮಿ ಗಳು ಭಾಗಿಯಾಗಲಿದ್ದು, ಒಂದು ಪರಿಹಾರಕ್ಕೆ ಬರಲಾಗುವುದು ಎಂದರು.

ಸಣ್ಣ ಕೈಗಾರಿಕೆಗಳಿಂದ ವಿದ್ಯುತ್ ದರ ಹೆಚ್ಚಳ ವಿರೋಧಿಸಿ ಪ್ರತಿಭಟನೆ ಮಾಡಲಾಗುತ್ತಿದೆ. ರಾಜ್ಯದ ಕೆಲವೆಡೆ ಸಣ್ಣ ಕೈಗಾರಿಕೆಗಳ ಸಂಘದಿಂದ ಪ್ರತಿಭಟನೆ ಮಾಡುತ್ತಿದ್ದಾರೆ. ಕೆಇಆರ್ ಸಿ ವಿದ್ಯುತ್ ದರ ಹೆಚ್ಚಳ ಮಾಡಿದೆ. ವಿಧಾನಸಭಾ ಚುನಾವಣೆ ವೇಳೆ ವಿದ್ಯುತ್ ದರ ಹೆಚ್ಚಳ ಮಾಡಿ ಆದೇಶ ಹೊರಡಿಸಲಾಗಿದೆ. ಈ ಎಲ್ಲಾ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಗುವುದು ಎಂದು ಅವರು ತಿಳಿಸಿದರು.

## ಆಹಾರ ಸಚಿವರ ಭೇಟಿಗೆ ಪ್ರಧಾನಿ ಅವಕಾಶ ನಿರಾಕರಣೆ ಖಂಡನೀಯ

ದಾವಣಗೆರೆ, ಜು.22- ಪ್ರಧಾನಿಯವರು ನಮ್ಮ ಆಹಾರ ಸಚಿವ ಕೆ. ಎಚ್. ಮುನಿಯಪ್ಪ ಅವರಿಗೆ ಭೇಟಿಗೆ ಅವಕಾಶ ನೀಡದಿರುವುದು ಖಂಡನೀಯ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದ್ದಾರೆ.

**ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ**

ಗುರುವಾರ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆಯಲು ಬದ್ಧವಿದೆ. ಆದರೆ, ಕೇಂದ್ರದ ಅಸಹಕಾರ ನೀತಿಯಿಂದ ಕೊಡಲು ಆಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ತೊಂದರೆಯಾಗಿದೆ. ಕೇಂದ್ರದ ಗೋದಾಮಿನಲ್ಲಿ ಅಕ್ಕಿ ದಾಸ್ತಾನಿದ್ದರೂ ರಾಜ್ಯಕ್ಕೆ ಕೊಡುತ್ತಿಲ್ಲ. ಪುಕ್ಕಟೆ ಕೇಳುತ್ತಿಲ್ಲ, ದುಡ್ಡು ಕೊಡುತ್ತೇವೆ ಎಂದರೂ ಕೇಳುತ್ತಿಲ್ಲ. ಬಡವರ ಅನ್ನದ ಜೊತೆ (3ನೇ ಪುಟಕ್ಕೆ)

# ಗ್ಯಾರಂಟಿ ಕೊಡಿ, ಇಲ್ಲವೇ ಅಧಿಕಾರದಿಂದ ತೊಲಗಿ

## ಕಾಂಗ್ರೆಸ್ ದ್ರೋಹದ ವಿರುದ್ಧ ಜು.5ರಿಂದ ಗಾಂಧಿ ಪ್ರತಿಮೆ ಎದುರು ಸತ್ಯಾಗ್ರಹ : ಯಡಿಯೂರಪ್ಪ

ದಾವಣಗೆರೆ, ಜೂ. 23 - ಚುನಾವಣೆ ವೇಳೆ ಭರವಸೆ ನೀಡಿದಂತೆ ಐದು ಗ್ಯಾರಂಟಿಗಳನ್ನು ಜಾರಿಗೆ ತರಲು ಸಾಧ್ಯವಾಗದೇ ಇದ್ದರೆ, ಕಾಂಗ್ರೆಸ್ ಸರ್ಕಾರ ಅಧಿಕಾರ ಬಿಟ್ಟು ತೊಲಗಲಿ ಎಂದು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಗುಡುಗಿದ್ದಾರೆ.

ನಗರದ ಅಭಿನವ ರೇಣುಕ ಮಂದಿರದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ಯಾರಂಟಿಗಳ ಭರವಸೆ ನೀಡಿ ಅಧಿಕಾರಕ್ಕೆ ಬಂದ ನಂತರ ಅವುಗಳನ್ನು ಜಾರಿಗೆ ತರದೇ ಇರುವುದನ್ನು ಜನ ಒಪ್ಪುವುದಿಲ್ಲ ಎಂದರು.

ಬರುವ ಜುಲೈ 4ರಿಂದ ವಿಧಾನ ಮಂಡಲದ ಅಧಿವೇಶನ ಆರಂಭವಾಗಲಿದೆ. ಜುಲೈ 5ರಿಂದ ಗ್ಯಾರಂಟಿಗಳ ಈಡೇರಿಕೆಗೆ ಒತ್ತಾಯಿಸಿ, ಬೆಂಗಳೂರಿನಲ್ಲಿ ಗಾಂಧಿ ಪ್ರತಿಮೆ ಎದುರು ನಾನು ಸತ್ಯಾಗ್ರಹಕ್ಕೆ ಕೂರುತ್ತೇನೆ. ಶಾಸಕರು ಸದನದ ಒಳಗೆ ಹೋರಾಟ ನಡೆಸಲಿದ್ದಾರೆ ಎಂದು ಯಡಿಯೂರಪ್ಪ ತಿಳಿಸಿದರು.

ಸದನದ ಒಳಗೆ ಹಾಗೂ ಹೊರಗೆ ಬಿಜೆಪಿ ತೀವ್ರ ಹೋರಾಟ ನಡೆಸಲಿದೆ. ಸರ್ಕಾರದ ಕಿವಿ - ಮೂಗು ಹಿಡಿದು ಗ್ಯಾರಂಟಿಗಳನ್ನು ಜಾರಿಗೆ ತರುವಂತೆ ಒತ್ತಾಯಿಸಲಿದ್ದೇವೆ ಎಂದು ಹೇಳಿದರು.

ಜನರಿಗೆ ಐದು ಗ್ಯಾರಂಟಿಗಳ ಭರವಸೆ ನೀಡಿ, ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್, ಈಗ ದ್ರೋಹ ಮಾಡಿದರೆ ಒಪ್ಪಲಾಗದು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅನ್ನಭಾಗ್ಯದ ಗ್ಯಾರಂಟಿಯಂತೆ ಕೇಂದ್ರದ ಐದು ಕೆಜಿ ಅಕ್ಕಿ ಹೊರತು ಪಡಿಸಿ ಹತ್ತು ಕೆಜಿ ಅಕ್ಕಿ ನೀಡಬೇಕು. ಪ್ರತಿ ವ್ಯಕ್ತಿಗೆ ತಲಾ 15 ಕೆಜಿ ಅಕ್ಕಿ ಕೊಡಬೇಕು ಎಂದು ಯಡಿಯೂರಪ್ಪ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ, ಪ್ರಧಾನಿ ಮೋದಿ ಅವರನ್ನು ಕೇಳಿ ಕಾಂಗ್ರೆಸ್ ಪಕ್ಷ ಅನ್ನಭಾಗ್ಯದ ಗ್ಯಾರಂಟಿ ಕೊಟ್ಟಿತ್ತೇ? ಗ್ಯಾರಂಟಿ ಈಡೇರಿಸುವ ಯೋಗ್ಯತೆ ನಮಗೆ ಇಲ್ಲ ಎಂದು ಅವರು ನೇರವಾಗಿ ಹೇಳಲಿ ಎಂದು ಕಿಡಿ ಕಾರಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಚುನಾವಣಾ ವೇಳೆ ಗ್ಯಾರಂಟಿಗಳನ್ನು ಆಮಿಷದ ರೀತಿ ತೋರಿಸಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಗ್ಯಾರಂಟಿ ಈಡೇರಿಸದೇ ಹೋದರೆ, ಅವರೇ ಅಧಿಕಾರ ಬಿಟ್ಟು ಹೋಗುವ ರೀತಿ ಹೋರಾಟ ಮಾಡಬೇಕು ಎಂದು ಹೇಳಿದರು. ಮಾಜಿ ಸಚಿವ ಗೋವಿಂದ ಕಾರಜೋಳ ಮಾತನಾಡಿ, ಎಫ್.ಸಿ.ಐ. ಅಕ್ಕಿ (3ನೇ ಪುಟಕ್ಕೆ)



ಕೇಂದ್ರದ ಮೋದಿ ಸರ್ಕಾರ 5 ಕೆಜಿ ಅಕ್ಕಿ ಕೊಡುತ್ತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ತನ್ನ ಭರವಸೆಯಂತೆ 10 ಕೆಜಿ ಅಕ್ಕಿ ಸೇರಿ ಒಟ್ಟು 15 ಕೆಜಿ ಅಕ್ಕಿ ಕೊಡಬೇಕು.

- ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ಸರ್ವರ್ ಹ್ಯಾಕ್ ಆಗಿದೆ ಎಂದು ಹೇಳುವ ಸಚಿವರು, ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡ ರೋಗಿಗಳ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಕೈಲಾಗದವರು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ.

- ಗೋವಿಂದ ಕಾರಜೋಳ, ಮಾಜಿ ಸಚಿವ

ಕಾಂಗ್ರೆಸ್ ಪಕ್ಷ ಐದು ಗ್ಯಾರಂಟಿಗಳ ಜೊತೆ, ಕೋಲಾರ ಮಹಿಳೆಯರ ಬೇಡಿಕೆಯಂತೆ ಸ್ತ್ರೀಶಕ್ತಿ ಸಂಘಗಳ ಸಾಲವನ್ನೂ ಮನ್ನಾ ಮಾಡಬೇಕು.

- ಜಿ.ಎಂ. ಸಿದ್ದೇಶ್ವರ, ಸಂಸದ

ಇನ್ನು ಆರು ತಿಂಗಳ ಕಾಲ ಹೆಚ್ಚಿನ ಅನುದಾನ ಕೇಳದಂತೆ ಕಾಂಗ್ರೆಸ್ ಶಾಸಕರಿಗೇ ತಿಳಿಸಲಾಗಿದೆ. ಆರು ತಿಂಗಳ ನಂತರ ಅನುದಾನ ಬರದೇ ಇದ್ದರೆ, ಬಿಜೆಪಿಯಿಂದಲೇ ಅಭಿವೃದ್ಧಿ ಸಾಧ್ಯ ಎಂದು ಆ ಶಾಸಕರೇ ಹೇಳಲಿದ್ದಾರೆ.

- ಬಿ.ಪಿ. ಹರೀಶ್, ಶಾಸಕ

ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೆರೆ ತುಂಬಿಸಿದೆವು, ಭದ್ರಾ ಮೇಲ್ದಂಡೆ ಜಾರಿಗೆ ತಂದೆವು. ಆದರೂ, ಕೆಲಸ ಮಾಡಿದವರನ್ನು ನಮ್ಮವರೇ ಸೋಲಿಸಿದ್ದಾರೆ.

- ಎಸ್.ವಿ. ರಾಮಚಂದ್ರ, ಮಾಜಿ ಶಾಸಕ

## ಪುರುಷರಿಗೆ ಕಿಕ್, ಮಹಿಳೆಯರಿಗೆ ಷಾಕ್

### ಅತ್ತೆ - ಸೊಸೆ ನಡುವೆ ಜಗಳ: ರೇಣುಕಾಚಾರ್ಯ

ಮದ್ಯದ ಮೇಲೆ ತೆರಿಗೆ ಹೆಚ್ಚಿಸಿರುವುದರಿಂದ ಕ್ವಾರ್ಟರ್ ಬೆಲೆ 40 ರೂ.ಗಳಿಂದ 70 ರೂ.ಗಳಿಗೆ ಹೆಚ್ಚಾಗಿದೆ ಎಂದು ಪುರುಷರು ಬೇಸರಗೊಂಡಿದ್ದಾರೆ. ಅವರ ಕಷ್ಟವನ್ನೂ ನಾವು ಕೇಳಬೇಕಿದೆ ಎಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದರು.
ಕರೆಂಟ್ ಬಿಲ್ ಹಲವು ಪಟ್ಟು ಹೆಚ್ಚಾಗಿ ಬಂದಿರುವುದರಿಂದ ಮಹಿಳೆಯರು ಶಪಿಸುತ್ತಿದ್ದಾರೆ. ಹೀಗಾಗಿ ಕಾಂಗ್ರೆಸ್‌ನದ್ದು ಒಂದು ರೀತಿ ಕಿಕ್ ಹಾಗೂ ಷಾಕ್ ಸರ್ಕಾರ ಎಂದವರು ಲೇವಡಿ ಮಾಡಿದರು.
ಗೃಹಲಕ್ಷ್ಮಿ ಯೋಜನೆಯಡಿ ಅತ್ತೆ ಇಲ್ಲವೇ ಸೊಸೆಯರಲ್ಲಿ ಒಬ್ಬರಿಗೆ ಮಾತ್ರ ಹಣ ನೀಡುವುದಾಗಿ ಹೇಳುವ ಮೂಲಕ, ಅವರ ನಡುವೆ ಜಗಳ ತರಲಾಗುತ್ತಿದೆ ಎಂದೂ ಆಕ್ಷೇಪಿಸಿದರು.

## ಸಿದ್ದೇಶ್ವರರಿಗೆ ಮತ್ತೆ ಟಿಕೆಟ್ ಸುಳಿವು ನೀಡಿದ ಬಿಎಸ್‌ವೈ

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಬಹುದು ಎಂದು ಯಡಿಯೂರಪ್ಪ ಸುಳಿವು ನೀಡಿದ್ದಾರೆ. ನಿಮ್ಮೆಲ್ಲರ ಆಶೀರ್ವಾದ ದಿಂದ ಸಿದ್ದೇಶ್ವರ ಮತ್ತೆ ಸಂಸದರಾಗಲಿದ್ದಾರೆ ಎಂದು ತಮ್ಮ ಭಾಷಣದ ಆರಂಭದಲ್ಲಿ ಹೇಳಿದರು. ಆ ಮೂಲಕ ಮತ್ತೆ ಸಿದ್ದೇಶ್ವರ ಸ್ಪರ್ಧಿಸುವ ಸುಳಿವು ನೀಡಿದರು. ಹೈಕಮಾಂಡ್ ಟಿಕೆಟ್ ನೀಡಿದರೆ ಮತ್ತೆ ಸ್ಪರ್ಧಿಸಲು ಸಿದ್ಧವಿರುವುದಾಗಿ ಸಿದ್ದೇಶ್ವರ ಅವರು ಇತ್ತೀಚೆಗೆ ಹೇಳಿದ್ದರು.

## ಮುಸ್ಲಿಮರ ಓಲೈಕೆಗಾಗಿ ಪಠ್ಯ ಪರಿಷ್ಕರಣೆ



ದಾವಣಗೆರೆ, ಜೂ. 22 - ಮುಂಬರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮುಸ್ಲಿಮರನ್ನು ಓಲೈಸುವ ಸಲುವಾಗಿ ಪಠ್ಯ ಪರಿಷ್ಕರಣೆ ಮಾಡಲಾಗಿದೆ ಎಂದು ಮಾಜಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಆರೋಪಿಸಿದ್ದಾರೆ.

ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಠ್ಯದಿಂದ ಸ್ವಾಮಿ ವಿವೇಕಾನಂದ ಕುರಿತ ಪಾಠ ತೆಗೆದು ಹಾಕಲಾಗಿದೆ. ರಾಮಾಯಣದ ಅಂಶ ಇರುವ ಕಾರಣ ಕುವೆಂಪು ಪಾಠ ತೆಗೆದಿದ್ದಾರೆ. ಭಗವದ್ಗೀತೆ ವಿಷಯ ಇದೆ ಎಂಬ ಕಾರಣಕ್ಕೆ ಮಹಾತ್ಮ ಗಾಂಧೀಜಿ ಉಪವಾಸ ಸತ್ಯಾಗ್ರಹದ ಪಾಠ ತೆಗೆದಿದ್ದಾರೆ ಎಂದು ಟೀಕಿಸಿದರು. ಆರ್.ಎಸ್.ಎಸ್. ಸ್ಥಾಪಕ ಕೇಶವ ಹೆಡ್ಗೇವಾರ್ ಅವರ ಪಾಠವನ್ನು ತೆಗೆಯಲಾಗಿದೆ. ಈ ಪಾಠವನ್ನು ಓದಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ನಾನ್ಯಾಕೆ ಓದಲಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಇದೆಲ್ಲವನ್ನು ನೋಡಿದಾಗ ಮುಸ್ಲಿಮರ ಓಲೈಕೆ ದೃಷ್ಟಿಯಿಂದ ಪಠ್ಯ ಪರಿಷ್ಕರಣೆ ಮಾಡಿರುವುದು ಗೊತ್ತಾಗುತ್ತದೆ ಎಂದು ನಾಗೇಶ್ ಹೇಳಿದರು.

ಪಠ್ಯ ಪರಿಷ್ಕರಣೆಗೆ ಆಕ್ಷೇಪವಿಲ್ಲ. ಆದರೆ, ಇದಕ್ಕೆ ಸರಿಯಾದ ಕ್ರಮ ಪಾಲಿಸಬೇಕಿತ್ತು. ಮೊದಲು ವಿಷಯ ಜನರ ಮುಂದಿಡಬೇಕಿತ್ತು. ಪರಿಣಿತರ ಸಮಿತಿ ಮೂಲಕ ಪರಿಶೀಲಿಸಬೇಕಿತ್ತು. ಶಿಕ್ಷಕರು, ತಜ್ಞರು (2ನೇ ಪುಟಕ್ಕೆ)

## ವಿದ್ಯುತ್ ದರ ಏರಿಕೆಗೆ ಜಿಲ್ಲಾ ವಾಣಿಜ್ಯ-ಕೈಗಾರಿಕಾ ಸಂಸ್ಥೆ ಖಂಡನೆ




ದಾವಣಗೆರೆ, ಜೂ. 22- ಕೆಇಆರ್‌ಸಿಯು ವಿದ್ಯುತ್ ಹೆಚ್ಚಿಸಿರುವುದರಿಂದ ಜನ ಸಾಮಾನ್ಯರ, ವರ್ತಕರ, ಕೈಗಾರಿಕೆಗಳ ಮೇಲೆ ಪರಿಣಾಮ ಬೀರಲಿದ್ದು, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ವಿದ್ಯುತ್ ಶುಲ್ಕವನ್ನು ಇಳಿಕೆ ಮಾಡುವಂತೆ ಒತ್ತಾಯಿಸಿ, ದಾವಣಗೆರೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಅಪರ ಜಿಲ್ಲಾಧಿಕಾರಿ ಲೋಕೇಶ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಅವೈಜ್ಞಾನಿಕ ವಿದ್ಯುತ್ ದರ ಹೆಚ್ಚಳದಿಂದ ಕೈಗಾರಿಕೆಗಳು ನಷ್ಟ ಅನುಭವಿಸುತ್ತಿವೆ. ಕೂಡಲೇ ವಿದ್ಯುತ್ ದರ ಇಳಿಕೆ ಮಾಡಬೇಕೆಂದು ಒತ್ತಾಯಿಸಿದರು.

ದುಪ್ಪಟ್ಟು ಪ್ರಮಾಣದಲ್ಲಿ ವಿದ್ಯುತ್ ದರ ಹೆಚ್ಚಳವಾಗಿದ್ದು, ಇದರಿಂದ ಕೈಗಾರಿಕಗಳು, (2ನೇ ಪುಟಕ್ಕೆ)

### ಕೆಎಸ್ಆರ್‌ಟಿಸಿ ನಿವೃತ್ತ ಸೂಪರಿಂಟೆಂಡೆಂಟ್
## ಎಂ.ಪಿ. ನಾರಪ್ಪ ನಿಧನ



ಬೆಂಗಳೂರು ವಾಸಿ ಮುತ್ತಗದೂರು ಹೆಗ್ಗೆರೆ ದಿ|| ಎಂ. ಪರ್ವತಪ್ಪ, ನಿವೃತ್ತ ಶಿಕ್ಷಕರು ಇವರ ಪುತ್ರ ಕೆ.ಎಸ್.ಆರ್.ಟಿ.ಸಿ. ನಿವೃತ್ತ ಅಧೀಕ್ಷಕರಾದ **ಶ್ರೀ ಎಂ.ಪಿ. ನಾರಪ್ಪ** ಅವರು ದಿನಾಂಕ 21-6-2023ರ ಬುಧವಾರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23-6-2023ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಬೆಂಗಳೂರು ಬಿಎಂಟಿಸಿ ಬಸ್‌ಸ್ಟ್ಯಾಂಡ್ ಹಿಂಭಾಗದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ವಿ.ಸೂ. : ದಿನಾಂಕ 23-3-2023ರ ಶುಕ್ರವಾರ ಮಧ್ಯಾಹ್ನ 1 ಗಂಟೆಯವರೆಗೆ ಮೃತರ ಪಾರ್ಥಿವ ಶರೀರವನ್ನು ಬೆಂಗಳೂರಿನ ಕೆಎಸ್‌ಆರ್‌ಟಿಸಿ ಲೇ ಔಟ್, ಜೆ.ಪಿ. ನಗರ, (# 73) 4ನೇ ಕ್ರಾಸ್‌ನಲ್ಲಿರುವ ಅವರ ನಿವಾಸದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
✦ ಪತ್ನಿ : ಶ್ರೀಮತಿ ಸಾವಿತ್ರಮ್ಮ ✦ ಪುತ್ರ : ಡಾ. ಎಂ.ಎನ್. ಚಿದಾನಂದ ಸ್ವಾಮಿ ಮತ್ತು ಮೃತರ ಸಹೋದರರು, ಹೆಗ್ಗೆರೆ ವಂಶಸ್ಥರು, ಮುತ್ತಗದೂರು.
ಮೊ. : 97399 73948, 97406 03383

hcgoncology.com
HCG The Specialist in Cancer Care
A HEALTHY LIFE WITH A NEW LIVER
Date : 25th Sunday, June 2023 / Time : 1.00 pm to 5.00 pm
Venue : Aaraike Super Specialty Hospital, Nittuvalli, Davangere-2.

Consultant :
DR. BASANT MAHADEVAPPA
Consultant HPB & Liver Transplant
To win over cancer, call today - 78294 34249
HCG HOSPITAL
9/1, Kalinga Rao Road, Sampangi Rama Nagar, Bengaluru, Karnataka 560002

NEET 2022 L.T. Marks 705
NEET 2020 Marks 703
NEET LONGTERM COACHING-2024
2nd Batch Admissions are in Progress
Limited Hostel facility Available
Reserve your seat
Expected number of free Medical seats is more than 340 in NEET-2023 from single campus
NEET - 2023
15 Students Above 650 Marks
59 Students Above 600 Marks
680/720 SAGAR H. P.
680/720 SRINIVAS B. M.
Scan for Details
SIR M V GROUP OF INSTITUTIONS
DAVANGERE | SHIMOGA Ph : 9148684483 | BALLARI Ph : 8197764018
Davangere Ph. : 08192-261200, 9243312223, 8722141400

# ಯೋಗ, ಪ್ರಾಣಾಯಾಮದಿಂದ ಶಾರೀರಿಕ ಹಾಗೂ ಮಾನಸಿಕ ಆರೋಗ್ಯ ಹೆಚ್ಚುತ್ತದೆ

### ಹರಪನಹಳ್ಳಿ : ಯೋಗ ದಿನಾಚರಣೆಯಲ್ಲಿ ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ



ಹರಪನಹಳ್ಳಿ, ಜೂ.22- ಯೋಗ ಅಧ್ಯಾತ್ಮಿಕ ಶಿಸ್ತು. ಮನಸ್ಸು ಮತ್ತು ದೇಹದ ನಡುವೆ ಸಾಮರಸ್ಯವನ್ನು ತರುವುದರ ಮೇಲೆ ಕೇಂದ್ರೀಕರಿಸುತ್ತದೆ ಎಂದು ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ಗೋಕರ್ಣೇಶ್ವರ ದೇವಸ್ಥಾನದ ಹತ್ತಿರವಿರುವ ಕಲಾ ಐಸಿರಿ ನೃತ್ಯ ತರಬೇತಿ ಕೇಂದ್ರದಲ್ಲಿ 9ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಸಾವಿರಾರು ವರ್ಷಗಳಿಂದಲೂ ಭಾರತ ದೇಶದಲ್ಲಿ ಆಚರಿಸಲ್ಪಡುತ್ತಿರುವ 'ಯೋಗ ವಿದ್ಯೆಯು' ಋಷಿ ಮುನಿಗಳಾದಿ ಸಾಧಕರಿಂದ ವಿದ್ಯೆ ಮತ್ತು ಜೀವನ ಶೈಲಿಯಾಗಿ ಹರಿದು ಬಂದಿದೆ ಶ್ವಾಸಕೋಶ ಬಲಗೊಳ್ಳಲು, ಯೋಗವು ಜೀವಿತಾವಧಿಯನ್ನು ವೃದ್ಧಿಸಿ, ಜತೆಗೆ ಯೌವ್ವನ ಹಾಗೂ ಸೌಂದರ್ಯವನ್ನು ಹೆಚ್ಚಿಸುವುದು. ಯೋಗ ಮತ್ತು ಪ್ರಾಣಾಯಾಮದಿಂದ ನಮ್ಮ ಶಾರೀರಿಕವಾದ ಹಾಗೂ ಮಾನಸಿಕ ಆರೋಗ್ಯ ಹೆಚ್ಚುತ್ತದೆ. ಯೋಗದಿಂದ ದೈಹಿಕ ಸಮಸ್ಯೆ ದೂರವಾಗುತ್ತದೆ. ಸದೃಢ ಆರೋಗ್ಯಕ್ಕಾಗಿ ಯೋಗಾಸನ. ರಕ್ತ ಪರಿಚಲನೆ, ರಕ್ತ ಶುದ್ಧಿ, ಕೋಪ ನಿವಾರಣೆ, ಬೊಜ್ಜು ಕರಗುವಿಕೆ, ಕೀಲು ನೋವು ನಿವಾರಣೆ, ಮತ್ತು ರಕ್ತದೊತ್ತಡದ ಮಟ್ಟವನ್ನು ಕಡಿಮೆ ಮಾಡುತ್ತದೆ. ಮೆದುಳಿನ, ವಾತ, ಪಿತ್ತ, ಕಫ ಈ ತ್ರಿದೋಷಗಳಿಂದ ಶರೀರವು ಮುಕ್ತವಾಗುತ್ತದೆ. ಥೈರಾಯ್ಡ್, ಬಿ.ಪಿ, ಕೊಲೆಸ್ಟ್ರಾಲ್, ಮಧುಮೇಹ, ಕಿಡ್ನಿ ಸಂಬಂಧಿತ ಕಾಯಿಲೆಗಳನ್ನು ನಿಯಂತ್ರಿಸಬಹುದು ಎಂದರು.

ಪ್ರಾಣಾಯಾಮದಿಂದ ನಮ್ಮ ದೇಹದಲ್ಲಿರುವ 72 ಸಾವಿರ ನಾಡಿಗಳು ಬಲಿಷ್ಠಗೊಳ್ಳುತ್ತವೆ. ಮಹಿಳೆಯರು ಯೋಗಾಸನ-ಪ್ರಾಣಾಯಾಮ ಮತ್ತು ಬದ್ಧಕೋನಾಸನ ಮಾಡುವುದರ ಮೂಲಕ ಮಹಿಳೆಯರ ಸಮಸ್ಯೆಗಳನ್ನು ದೂರ ಮಾಡಬಹುದು ಹಾಗೂ ಹೆಚ್ಚು ಹೆಚ್ಚು ನೀರನ್ನು ಕುಡಿಯುವುದರ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಅಡುಗೆಯಲ್ಲಿ ಸಕ್ಕರೆ, ಉಪ್ಪು, ಮಸಾಲೆ ಪದಾರ್ಥ ಮತ್ತು ಎಣ್ಣೆ ಪದಾರ್ಥಗಳನ್ನು ಕಡಿಮೆ ಬಳಸಬೇಕು ಎಂದರು.

ಯೋಗ ತರಬೇತಿಯಲ್ಲಿ ನಂದಿನಿ, ಸೌಮ್ಯ, ಪ್ರೀತಿ, ಮೀನಾಕ್ಷಿ, ಅಶ್ವಿನಿ, ಶಾಂತ, ಸಪ್ನ ಮಲ್ಲಿಕಾರ್ಜುನ್, ಚನ್ನವೀರಸ್ವಾಮಿ ಇತರರು ಇದ್ದರು.

# ವಿದ್ಯುತ್ ಬೆಲೆ ಏರಿಕೆ ವಿರುದ್ಧ ರಾಜ್ಯದ ಹಲವೆಡೆ ಪ್ರತಿಭಟನೆ

ಬೆಂಗಳೂರು, ಜೂ. 22 – ವಿದ್ಯುತ್ ಬೆಲೆ ಏರಿಕೆ ವಿರುದ್ಧ ರಾಜ್ಯದ ಹಲವೆಡೆಗಳಲ್ಲಿ ವರ್ತಕರು ಹಾಗೂ ಸಣ್ಣ ವ್ಯಾಪಾರಿಗಳು ಪ್ರತಿಭಟನೆ ನಡೆಸಿದ್ದಾರೆ. ಬೆಲೆ ಏರಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸಹಕಾರ ನೀಡಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಕರೆ ನೀಡಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಸಚಿವರು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಬೆಲೆ ಏರಿಕೆ ಮಾಡಿದೆಯೇ ಹೊರತು ರಾಜ್ಯ ಸರ್ಕಾರ ಅಲ್ಲ ಎಂದಿದ್ದಾರೆ.

ವಿದ್ಯುತ್ ಬೆಲೆ ಏರಿಕೆಯಾದರೆ ಅಕ್ಕಿ ಬೆಲೆ ಕೆಜಿಗೆ 3ರಿಂದ 5ರೂ. ಹೆಚ್ಚಾಗಲಿದೆ ಎಂದು ರಾಜ್ಯ ಅಕ್ಕಿ ಗಿರಣಿಗಳ ಮಾಲೀಕರ ಒಕ್ಕೂಟ (ಕೆ.ಎಸ್.ಆರ್.ಎಂ.ಎ.) ಇಂಗಿತ ವ್ಯಕ್ತಪಡಿಸಿದೆ.

ಈ ಬಗ್ಗೆ ಮಾತನಾಡಿರುವ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್. ಶಿವಕುಮಾರ್, ನಾವು ಬೆಲೆ ಏರಿಕೆ ಮಾಡಿಲ್ಲ. ವಿದ್ಯುತ್ ಹಾಗೂ ಭತ್ತದ ಬೆಲೆ ಹೆಚ್ಚಾಗಿದೆ. ಹಲವಾರು ತಳಿಗಳ ಅಕ್ಕಿ ಬೆಲೆ 3ರಿಂದ 5 ರೂ. ಹೆಚ್ಚಾಗಲಿದೆ ಎಂದಿದ್ದಾರೆ.

ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಗುರುವಾರದಂದು ಬಂದ್‌ಗೆ ಕರೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಹಲವೆಡೆ ಕೈಗಾರಿಕೋದ್ಯಮಿಗಳು ಹಾಗೂ ಸಣ್ಣ ವರ್ತಕರು ಪ್ರತಿಭಟನೆ ನಡೆಸಿದ್ದಾರೆ.

ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗ, ಬೆಳಗಾವಿ, ಬಳ್ಳಾರಿ, ವಿಜಯನಗರ, ದಾವಣಗೆರೆ, ಕೊಪ್ಪಳ ಸೇರಿದಂತೆ ಹಲವೆಡೆ ಪ್ರತಿಭಟನೆ ನಡೆಸಲಾಗಿದೆ. ಬೆಳಗಾವಿಯಲ್ಲಿ ದೊಡ್ಡ ಸಂಖ್ಯೆಯ ವರ್ತಕರು ಹಾಗೂ ಮಿಲ್‌ಗಳ ಮಾಲೀಕರು ಪ್ರತಿಭಟನೆ ನಡೆಸಿದ್ದಾರೆ.

ಕೈಗಾರಿಕೆಗಳು ಬಳಸುವ ವಿದ್ಯುತ್ ಬೆಲೆ ಶೇ.50 ರಿಂದ 70ರವರೆಗೆ ಹೆಚ್ಚಿಸಲಾಗಿದೆ. ಇದರಿಂ ದಾಗಿ ಸಣ್ಣ ಉದ್ಯಮಗಳಿಗೆ ಹೊಡೆತ ಬಿದ್ದಿದೆ ಎಂದು ಕೆ.ಸಿ.ಸಿ.ಐ. ಹಂಗಾಮಿ ಅಧ್ಯಕ್ಷ ಸಂದೀಪ್ ಹೇಳಿದ್ದಾರೆ.

ಭಾರೀ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಿರುವ ಹಿನ್ನೆಲೆಯಲ್ಲಿ ಹಲವು ಕೈಗಾರಿಕೆಗಳು ನೆರೆ ರಾಜ್ಯವಾದ ಮಹಾರಾಷ್ಟ್ರಕ್ಕೆ ಹೋಗುವ ಸಿದ್ಧತೆ ನಡೆಸಿವೆ ಎಂದೂ ಅವರು ಹೇಳಿದ್ದಾರೆ.

ಬೀದರ್‌ನಲ್ಲಿ ಹಲವಾರು ಅಂಗಡಿಗಳು ಮುಚ್ಚಿದ್ದವು. ಮುಖ್ಯ ಮಾರುಕಟ್ಟೆ ಸಂಪೂರ್ಣ ಬಂದ್ ಆಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಸಚಿವ ಪಾಟೀಲ್, ನಾವು ವಿದ್ಯುತ್ ಬೆಲೆ ಏರಿಕೆ ಮಾಡಿಲ್ಲ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಸ್ವಾಯತ್ತ ಸಂಸ್ಥೆಯಾಗಿದ್ದು, ಅದು ಬೆಲೆ ಏರಿಕೆ ಮಾಡಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ಬೆಲೆ ಏರಿಕೆ ಆಗಿದೆ. ಇದಕ್ಕೂ ನಮಗೂ ಸಂಬಂಧ ಇಲ್ಲ ಎಂದಿದ್ದಾರೆ.

ಬೆಲೆ ಏರಿಕೆ ವಾಪಸ್ ಪಡೆಯಲಾಗದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಆದರೂ, ಈ ಬಗ್ಗೆ ಸಿದ್ದರಾಮಯ್ಯ ಹಾಗೂ ಇಂಧನ ಸಚಿವ ಕೆ.ಜೆ. ಜಾರ್ಜ್ ಜೊತೆ ಚರ್ಚಿಸಲಾಗುವುದು ಎಂದು ಪಾಟೀಲ್ ಹೇಳಿದ್ದಾರೆ.

ಈ ನಡುವೆ, ಬೆಂಗಳೂರಿನಲ್ಲಿ ನೀರು ಪೂರೈಕೆ ದರ ಹೆಚ್ಚಿಸುವ ಬಗ್ಗೆಯೂ ಪರಿಶೀಲನೆ ನಡೆದಿದೆ. ಹಲವಾರು ವರ್ಷಗಳಿಂದ ಬೆಲೆ ಏರಿಕೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಪರಿಷ್ಕರಣೆಗೆ ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ಸಿದ್ಧಾರೂಢ ಪರಂಪರೆಯ ಮಠಗಳು ಸರ್ವ ಜನಾಂಗದ ಶಾಂತಿಯ ತೋಟವಿದ್ದಂತೆ



ಐರಣಿ ಹೊಳೆಮಠದಲ್ಲಿ ನಡೆದ ಮುಪ್ಪಿನಪ್ಪಜ್ಜನ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಪುತ್ರ ಕಾಂತೇಶ

ರಾಣೇಬೆನ್ನೂರು, ಜೂ. 22- ಸಿದ್ಧಾರೂಢ ಪರಂಪರೆಯ ಮಠಗಳು ಸರ್ವ ಜನಾಂಗದ ಶಾಂತಿಯ ತೋಟವಿದ್ದಂತೆ. ಇಲ್ಲಿ ನಡೆಯುವ ಸಮಾರಂಭಗಳಲ್ಲಿ ಎಲ್ಲಾ ಸಮಾಜಗಳ ಗುರುಗಳು, ಭಕ್ತರು ಪಾಲ್ಗೊಳ್ಳುತ್ತಾರೆ. ಇಲ್ಲಿ ಮದುವೆ ಆಗುವ ದಂಪತಿಗಳು ಪುಣ್ಯವಂತರು ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಪುತ್ರ ಕಾಂತೇಶ ಹೇಳಿದರು.

ತಾಲ್ಲೂಕಿನ ಐರಣಿ ಹೊಳೆಮಠದಲ್ಲಿ ನಡೆದ ಮುಪ್ಪಿನಪ್ಪಜ್ಜನ ಪುಣ್ಯಾರಾಧನೆ, ತುಲಾಭಾರ, ಸಾಮೂಹಿಕ ವಿವಾಹ, ರಥೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.


ಮಾಜಿ ಶಾಸಕ ಅರುಣಕುಮಾರ ಪೂಜಾರ ಮಾತನಾಡಿ, ದೇಶದಲ್ಲಿ ಶಾಂತಿ, ಸುವ್ಯವಸ್ಥೆಗೆ ನೀವು ನಮ್ಮನ್ನು ಬೆಂಬಲಿಸಬೇಕಿತ್ತು. ದೇಶದ ಪ್ರಗತಿ ಬಗ್ಗೆ ಪ್ರತಿಯೊಬ್ಬರೂ ಜವಾಬ್ದಾರಿಯುತವಾಗಿ ಚಿಂತಿಸಬೇಕಿದೆ. ಈಗ ಮಾಡಿದ ತಪ್ಪನ್ನು ಮುಂದೆ ಮಾಡಬೇಡಿ. ಬರುವ ಚುನಾವಣೆಗಳಲ್ಲಿ ನಮಗೆ ಆಶೀರ್ವದಿಸಿರಿ ಎಂದರು.

ಮೂರು ವರ್ಷಗಳ ಹಿಂದೆ ಜನರು ಆಶೀರ್ವದಿಸಿದ್ದರು. ಅಭಿವೃದ್ಧಿ ಕಾರ್ಯಗಳನ್ನು ಮಾಡಿದೆ. ನನಗೆ ಅವಕಾಶ ಕಡಿಮೆ ಇದ್ದರೂ ಸಹ ಅತ್ಯಂತ ಹೆಚ್ಚು ಸೇವೆ ಮಾಡಿದ ನೆಮ್ಮದಿ ಇದೆ. ಮುಂದೆ ನನಗೆ ಆಶೀರ್ವಾದ ಸಿಗುತ್ತದೆ ಎನ್ನುವ ನಂಬಿಕೆ ನನ್ನದು. ಸೋತರೂ ಸಹ ಐರಣಿ ಮಠದ ಸೇವೆಯಲ್ಲಿ ನಾನು ನಿರಂತರವಾಗಿರುತ್ತೇನೆ ಎಂದು ಅರುಣಕುಮಾರ ಹೇಳಿದರು.

ದಾವಣಗೆರೆ ಶಿವಾನಂದ ಶ್ರೀಗಳು, ಹದಡಿ ಮುರುಳೀಧರ ಶ್ರೀಗಳು, ಜೋಡಕುರುಳಿ ಚಿದ್ಘಾನಾನಂದ ಶ್ರೀಗಳು, ತೆಲಗಿ ಪೂರ್ಣಾನಂದ ಶ್ರೀಗಳು, ಹೋತನಹಳ್ಳಿ ಶಂಕರಾನಂದ ಶ್ರೀಗಳು, ಹರಿಹರ ನಗರಸಭೆ ಮಾಜಿ ಅಧ್ಯಕ್ಷ ರೇವಣಸಿದ್ದಪ್ಪ, ರಾಣೇಬೆನ್ನೂರು ನಗರಸಭೆ ಸದಸ್ಯ ಪ್ರಕಾಶ ಪೂಜಾರ, ಪವನ ಮಲ್ಲಾಡದ, ಸಿದ್ದು ಚಿಕ್ಕಬಿದರಿ ಆಗಮಿಸಿದ್ದರು.

ಮಠದ ಸಂಚಾಲಕ ಬಾಬು ಶೆಟ್ಟರ್ ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು. ಪೀಠಾಧಿಪತಿ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳ ತುಲಾಭಾರದ ನಂತರ ಆಶೀರ್ವಚನ ನೀಡಿದರು. ಕೊನೆಯಲ್ಲಿ ರಥೋತ್ಸವ ಕಾರ್ಯಕ್ರಮಗಳು ನಡೆದವು.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676-91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ಪದ್ಮಸಾಲಿ ಯುವಕರ ಸಂಘದಿಂದ ಪುರಸ್ಕಾರ

ದಾವಣಗೆರೆ, ಜೂ.22- ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ (ನೇಕಾರ) ಯುವಕರ ಸಂಘದಿಂದದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ.80 ರಷ್ಟು ಅಂಕ ಗಳಿಸಿ ಉತ್ತೀರ್ಣರಾದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಸಮಾಜದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಇದೇ ದಿನಾಂಕ 25 ಅಂತಿಮ ದಿನ. ವಿವರಕ್ಕೆ ಸಂಪರ್ಕಿಸಿ : 98866 14722.

# ಪಠ್ಯ ಪರಿಷ್ಕರಣೆ

**(1ನೇ ಪುಟದಿಂದ)** ಹಾಗೂ ಪೋಷಕರ ಜೊತೆ ಚರ್ಚಿಸಬೇಕಿತ್ತು ಎಂದರು. ಇದಾವುದನ್ನೂ ಮಾಡಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆ ನಡೆಸಿದ್ದಾರೆ. ನಂತರ ನೇರವಾಗಿ ಪಠ್ಯ ಪರಿಷ್ಕರಣೆಯನ್ನು ಸಂಪುಟಕ್ಕೆ ಕಳಿಸಲಾಗಿದೆ. ಕೆಲವು ನಿರುದ್ಯೋಗಿ ಬುದ್ಧಿಜೀವಿಗಳನ್ನು ತೃಪ್ತಿಪಡಿಸಲು ಈ ರೀತಿ ಮಾಡಲಾಗಿದೆ ಎಂದು ಆರೋಪಿಸಿದರು.

ಮಕ್ಕಳ ಕಲಿಕೆ ಉತ್ತಮ ಪಡಿಸಲು ಕಲಿಕಾ ಚೇತರಿಕೆ ಜಾರಿಗೆ ತರಲಾಗಿತ್ತು. ಆದರೆ, ಈ ಸರ್ಕಾರ ಅದನ್ನು ರದ್ದುಗೊಳಿಸಿದೆ. ಮಕ್ಕಳಿಗೆ ನೀಡಲಾಗುತ್ತಿದ್ದ ಕೋಳಿ ಮೊಟ್ಟೆ ಪ್ರಮಾಣ ಕಡಿತಗೊಳಿಸಲಾಗಿದೆ. ಇವರಿಗೆ ಮಕ್ಕಳ ಕಲಿಕೆ ಹಾಗೂ ಪೌಷ್ಠಿಕತೆಯ ಬಗ್ಗೆ ಕಾಳಜಿ ಇಲ್ಲ ಎಂದು ಟೀಕಿಸಿದರು. ನೂತನ ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ರದ್ದುಗೊಳಿಸುವುದಾಗಿ ರಾಜ್ಯ ಸರ್ಕಾರ ಹೇಳುತ್ತಿದೆ. ಆದರೆ, ಆಡಳಿತಾರೂಢ ಸಚಿವರು ಹಾಗೂ ಶಾಸಕರು ಸಿ.ಬಿ.ಎಸ್.ಇ. ಶಾಲೆಗಳನ್ನು ನಡೆಸುತ್ತಿದ್ದು, ಅಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ಪದ್ಧತಿಯೇ ಮುಂದುವರೆಯಲಿದೆ. ಬಡ ಮಕ್ಕಳನ್ನು ಈ ಪದ್ಧತಿಯಿಂದ ದೂರ ಮಾಡಲು ಹುನ್ನಾರ ನಡೆಸಲಾಗುತ್ತಿದೆ ಎಂದು ನಾಗೇಶ್ ಆರೋಪಿಸಿದರು.

## ಇಂದು ಗ್ರಾಹಕ ಸಂಪರ್ಕ ಕಾರ್ಯಕ್ರಮ

ಲೀಡ್ ಬ್ಯಾಂಕ್ ವತಿಯಿಂದ ಕೇಂದ್ರ ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಗಳ ಅರಿವು ಮೂಡಿಸಲು ಗ್ರಾಹಕ ಸಂಪರ್ಕ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಗಂಟೆಗೆ ರೋಟರಿ ಬಾಲಭವನದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸುವರು. ಕೆನರಾ ಬ್ಯಾಂಕ್ ಸಹಾಯಕ ಮಹಾಪ್ರಬಂಧಕ ವೈ.ವಿ.ಎನ್. ಶಿವಪ್ರಸಾದ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಅನಿಲ್ ಬಿಹಾರಿ, ಪ್ರವೀಣ್ ಪ್ರಭಾಕರ್ ಭಾಗವಹಿಸುವರು. ಪ್ರಕಾಶ್ ಜಿ.ಸಿ. ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

# 158 ನಿವೇಶನಗಳಿಗಾಗಿ 2400 ಅರ್ಜಿ ಪಡೆದ ಜನರು

### ಮಲೇಬೆನ್ನೂರಿನಲ್ಲಿ ಛಾಪಾ ಕಾಗದಕ್ಕಾಗಿ ಜನ ಜಾತ್ರೆ

ಮಲೇಬೆನ್ನೂರು, ಜೂ. 22- ಇಲ್ಲಿನ ಆಶ್ರಯ ಕಾಲೋನಿಯ ಪಕ್ಕದಲ್ಲಿರುವ ಪುರಸಭೆಯ 5 ಎಕರೆ ಜಾಗವನ್ನು ನಿವೇಶನ, ವಸತಿ ರಹಿತರಿಗೆ ಹಂಚಿಕೆ ಮಾಡಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಿದ್ದು, ಗುರುವಾರ ಸಾಯಂಕಾಲ ಮಾಹಿತಿ ಪ್ರಕಾರ 2400 ಕ್ಕೂ ಹೆಚ್ಚು ಅರ್ಜಿಗಳನ್ನು ಸಾರ್ವಜನಿಕರು ಪಡೆದಿದ್ದಾರೆ.

5 ಎಕರೆ ಜಾಗದಲ್ಲಿ 20x30 ಅಳತೆಯ 158 ನಿವೇಶನಗಳಾಗುವ ಸಾಧ್ಯತೆ ಇದೆ. ಜಿ+2 ಮಾದರಿಯ ಮನೆಗಳನ್ನು ಸರ್ಕಾರದಿಂದ ನಿರ್ಮಿಸಿದರೆ ಸುಮಾರು 500 ಫಲಾನುಭವಿಗಳಿಗೆ ಹಂಚಿಕೆ ಮಾಡಬಹುದೆಂದು ಹೇಳಲಾಗಿದೆ. ಆದರೆ ಅರ್ಜಿ ಪಡೆದಿರುವ, ಪಡೆಯುವವರ ಸಂಖ್ಯೆ 3 ಸಾವಿರ ತಲುಪುವ ಸಾಧ್ಯತೆ ಇದ್ದು, ಇದರಲ್ಲಿ ಯಾವ ರೀತಿ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ.

ಮಲೇಬೆನ್ನೂರು ಗ್ರಾ.ಪಂ. ಇದ್ದಾಗಲೂ ಇದೇ ಜಾಗಕ್ಕೆ ಇದೇ ರೀತಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆಗಲು ಇಷ್ಟೇ ಪ್ರಮಾಣದಲ್ಲಿ ಅರ್ಜಿ ಬಂದಿದ್ದವು. ಆಗ ಅರ್ಜಿ ಸಲ್ಲಿಸಿರುವ ಬಗ್ಗೆ ಈಗಿನ ಪುರಸಭೆ ಅವರಿಗೆ ಮಾಹಿತಿ ಎಂದು ಹೇಳಲಾಗುತ್ತಿದ್ದರೂ ಪಟ್ಟಣದಲ್ಲಿ ನಿವೇಶನ ಹಂಚಿಕೆ ಮಾಡುವುದು ದೊಡ್ಡ ಸವಾಲಾಗಿ ಪರಿಣಮಿಸಲಿದೆ.

**ಮುಂದುವರೆದ ಜಾತ್ರೆ:** ನಿವೇಶನಕ್ಕೆ ಅರ್ಜಿಯೊಂದಿಗೆ 20 ರೂಪಾಯಿ ಛಾಪಾ ಕಾಗದವನ್ನು ನೋಟರಿ ಮಾಡಿಸಿ ಕೊಡಬೇಕಾಗಿದ್ದು, ಛಾಪಾ ಕಾಗದ ಪಡೆಯಲು ಗುರುವಾರವೂ ನಂದಿ ಸೌಹಾರ್ದ ಸಹಕಾರಿ ಮತ್ತು ಶಿವ ವಿವಿಧೋದ್ದೇಶ ಸಹಕಾರ ಸಂಘಗಳಲ್ಲಿ ಜನ ಜಾತ್ರೆ ಕಂಡು ಬಂತು.

ಎರಡೂ ಸಂಘಗಳಲ್ಲಿ ಇದುವರೆಗೆ 1 ಸಾವಿರಕ್ಕೂ ಹೆಚ್ಚು ಜನರಿಗೆ ಛಾಪಾ ಕಾಗದಗಳನ್ನು ವಿತರಿಸಲಾಗಿದೆ ಎಂದು ಹೇಳಲಾಗಿದೆ.

## ಸಂಸದ ಸಿದ್ದೇಶ್ವರ ಇಂದಿನ ಕಾರ್ಯಕ್ರಮ

ಜಿಲ್ಲಾ ಲೀಡ್ ಬ್ಯಾಂಕ್ ವತಿಯಿಂದ ಏರ್ಪಾಡಾಗಿರುವ ಕೇಂದ್ರ ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಗಳ ಅರಿವು ಹಾಗೂ ಫಲಾನುಭವಿಗಳು ಸಭೆಯು ಇಂದು ಬೆಳಿಗ್ಗೆ 11.30 ಕ್ಕೆ ರೋಟರಿ ಬಾಲ ಭವನದಲ್ಲಿ ನಡೆಯಲಿದೆ.

# ಇತಿಹಾಸ ಅಧ್ಯಯನದಿಂದ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಜೀವನ ಕಟ್ಟಿಕೊಳ್ಳಬಹುದು

### ಪ್ರಾಚ್ಯ ಅವಶೇಷಗಳ ಪ್ರದರ್ಶನ ಕಾರ್ಯಕ್ರಮದಲ್ಲಿ ಡಾ. ಕುಮಾರ್




ದಾವಣಗೆರೆ, ಜೂ. 22- ಇತಿಹಾಸ ಒಂದು ದೀಪವಿದ್ದಂತೆ. ಅದು ಬೆಳಗಿದಾಗ ಕೊಠಡಿಯ ತುಂಬೆಲ್ಲಾ ಬೆಳಕಾಗುವುದು, ಇತಿಹಾಸ ವಿಷಯದ ಅಧ್ಯಯನದಿಂದ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ತಮ್ಮ ಜೀವನವನ್ನು ಕಟ್ಟಿಕೊಳ್ಳಬಹುದು ಎಂದು ಎವಿಕೆ ಮಹಿಳಾ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ತಿಳಿಸಿದರು.

ನಗರದ ಎಂ.ಎಸ್.ಬಿ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಕಳೆದ ವಾರ ಏರ್ಪಡಿಸಿದ್ದ ಪ್ರಾಚ್ಯ ಅವಶೇಷಗಳ ಪ್ರದರ್ಶನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ. ಕೆ.ವೈ. ಈಶ್ವರ್ ಮಾತನಾಡಿ, 'ಪ್ರಾಚ್ಯ ಅವಶೇಷಗಳ ಕ್ರೋಢೀಕರಣ ನನಗೆ ಹೆಮ್ಮೆಯ ವಿಚಾರವಾಗಿದ್ದು, ಈ ಕಾರ್ಯಕ್ರಮದ ಮೂಲಕ ಇತಿಹಾಸ ಮತ್ತು ಇತಿಹಾಸಕಾರರಿಗೆ ಹಾಗೂ ನಮ್ಮ ಪ್ರಾಚೀನ ಮಾನವನಿಗೆ ಗೌರವ ಸೂಚಿಸುವಂತಹ ಕಾರ್ಯಕ್ರಮವಾಗಿದೆ. ಕಾರಣ ಇತಿಹಾಸದ ಆರಂಭ ಪ್ರಾಚ್ಯ ಅವಶೇಷಗಳಿಂದಲೇ ಆಯಿತು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ನೀಲಾಂಬಿಕ ಜಿ.ಸಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಎಂ. ಮಂಜಪ್ಪ ಈ ವಿಷಯದ ಕುರಿತು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಉಪನ್ಯಾಸಕರಾದ ಕೆ. ಪವಿತ್ರ ನಿರೂಪಿಸಿದರು. ಹೆಚ್.ಪಿ. ಯಶವಂತಕುಮಾರ್ ಸ್ವಾಗತಿಸಿದರು. ಎಸ್. ಪರಮೇಶಿ ವಂದಿಸಿದರು. ಅಂಕಿತಾ ಪ್ರಾರ್ಥಿಸಿದರು. ಎಸ್. ಪ್ರಕಾಶ್ ಕಾರ್ಯಕ್ರಮದ ಆಯೋಜನೆಗೆ ಸಹಕರಿಸಿದರು.

# ತೊಗಟವೀರ ಸಮಾಜ ಸೇವಾ ಸಮಿತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ,ಜೂ.22- ನಗರದ ಶ್ರೀ ತೊಗಟವೀರ ಸಮಾಜ ಸೇವಾ ಸಮಿತಿ ವತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ.80 ಅಂಕ ಗಳಿಸಿದ ಹಾಗೂ ಯಾವುದೇ ಪದವಿಯಲ್ಲಿ ಶೇ.75 ಅಂಕಗಳನ್ನು ಪಡೆದ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಪ್ರತಿಭಾನ್ವಿತ ವಿದ್ಯಾರ್ಥಿಗಳು ಆಗಸ್ಟ್ 1 ರೊಳಗಾಗಿ ಅರ್ಜಿಯ ಜೊತೆಗೆ ಇತ್ತೀಚಿಗಿನ 2 ಭಾವಚಿತ್ರ, ಅಂಕಪಟ್ಟಿ ಪ್ರತಿ, ಜಾತಿ ಪ್ರಮಾಣ ಪತ್ರ, ಮತ್ತು ಟಿ.ಸಿ ಯ ಪ್ರತಿಗಳನ್ನು ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ಶ್ರೀ ತೊಗಟವೀರ ಸಮುದಾಯ ಭವನದಲ್ಲಿ ಸಲ್ಲಿಸಬಹುದು.

# ವಿಶ್ವದಲ್ಲೇ ಅತಿ ಹೆಚ್ಚು ಶಿಕ್ಷಕರನ್ನು ತರಬೇತಿಗೊಳಿಸುವುದು ಭಾರತ

### ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಾವಣಗೆರೆ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಡೀನ್ ಡಾ.ವೆಂಕಟೇಶ್

ಹರಿಹರ, ಜೂ. 22 - ವಿಶ್ವದಲ್ಲಿ ಅತಿ ಹೆಚ್ಚು ಶಿಕ್ಷಕರನ್ನು ಪ್ರತಿ ವರ್ಷವೂ ತರಬೇತಿಗೊಳಿಸುವ ದೇಶ ಭಾರತವಾದರೆ, ಶಿಕ್ಷಕರಿಗೆ ಅತಿ ಹೆಚ್ಚಿನ ವೇತನ ನೀಡುವ ದೇಶ ಜರ್ಮನಿ ಎಂದು ದಾವಣಗೆರೆ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಡೀನ್ ಡಾ.ವೆಂಕಟೇಶ್ ತಿಳಿಸಿದರು.

ಇಲ್ಲಿನ ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಸಕ್ತ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿ ಕೊಂಡವರು ಯಾವತ್ತು ನಿರುದ್ಯೋಗವನ್ನು ಹೊಂದು ವುದಿಲ್ಲ, ಸರ್ಕಾರಿ, ಖಾಸಗಿ ಅಥವಾ ಸ್ವತಃ ತಾವೇ ಮನೆ ಪಾಠವನ್ನು ಮಾಡಿ ಜೀವನ ರೂಪಿಸಿಕೊಳ್ಳಬಹುದು ಎಂದು ತಿಳಿಸುತ್ತಾ, ತಾವು ವಿಶ್ವವಿದ್ಯಾಲಯದಲ್ಲಿ ಇಂದು ಉನ್ನತ ಹುದ್ದೆಗೆ ಏರಲು ಈ ಕಾಲೇಜು ಮತ್ತು ಶಿಕ್ಷಣ ಸಂಸ್ಥೆ ಹಾಗು ಗುರುಗಳ ಆಶೀರ್ವಾದ ಕಾರಣ ಎಂದು ನೆನಪಿಸಿಕೊಂಡರು.

ಸಂಸ್ಥೆಯ ಕಾರ್ಯದರ್ಶಿ ಆರ್.ಟಿ.ಪ್ರಶಾಂತ್ ದುಗ್ಗತ್ತಿಮಠ್ ಮಾತನಾಡಿ, ಶಿಕ್ಷಕ ವೃತ್ತಿ ಅತ್ಯಂತ ಉನ್ನತ ಹುದ್ದೆಯಾಗಿದ್ದು, ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ತಮ್ಮ ಕಾಲೇಜಿನ ಬಗ್ಗೆ ಮಾಹಿತಿ ನೀಡಿದರು.

ಸಮಾರಂಭದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ, ನಿರ್ದೇಶಕ ಎನ್.ಹೆಚ್.ಪಾಟೀಲ್, ಕಾಲೇಜಿನ ಪ್ರಾಚಾರ್ಯ ಡಾ.ಬಿ.ಆರ್ ಗುರುದೇವ್ ಮತ್ತು ಪದವಿ ಕಾಲೇಜಿನ ಉಪನ್ಯಾಸಕ ಡಾ.ರಮೇಶ್ ಪರ್ವತಿ ಉಪಸ್ಥಿತರಿದ್ದರು.

ಉಪನ್ಯಾಸಕರಾದ ಶ್ರೀಮತಿ ಹರ್ಷಲತಾ ಅವರು ವಿದ್ಯಾರ್ಥಿ ಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.




## ದೈವಜ್ಞ ಬ್ರಹ್ಮಣ ಸಮಾಜದ ಡಿ. ರಮೇಶ್ ನಿಧನ



ದಾವಣಗೆರೆ ಎಂ.ಬಿ. ಕೇರಿ ನಿವಾಸಿ

**ಕುಂಬಳೂರು ಡಿ. ರಮೇಶ್**

ಇವರು ದಿನಾಂಕ 22.6.2023ರ ಗುರುವಾರ ಮಧ್ಯಾಹ್ನ 1ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 53 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.6.2023ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ಪಿ.ಬಿ ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ : ಡಿ. ಪ್ರಕಾಶ - 93804 13930**


# ದರ ಏರಿಕೆಗೆ ವಾಣಿಜ್ಯ-ಕೈಗಾರಿಕಾ ಸಂಸ್ಥೆ ಖಂಡನೆ

**(1ನೇ ಪುಟದಿಂದ)** ವರ್ತಕರಿಗೆ ಮಾತ್ರವಲ್ಲದೇ ಜನ ಸಾಮಾನ್ಯರ ಮೇಲೂ ಅಧಿಕ ಭಾರ ಹೇರಿದಂತಾಗಿದೆ. ಸರ್ಕಾರ ಪರಾಮರ್ಶಿಸಿ ಕೂಡಲೇ ವಿದ್ಯುತ್ ಶುಲ್ಕ ಇಳಿಕೆ ಮಾಡಬೇಕೆಂದು ಆಗ್ರಹಿಸಿದರು.

ಮನವಿ ಸಲ್ಲಿಸುವ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ, ಜಂಟಿ ಕಾರ್ಯದರ್ಶಿ ಕಿರುವಾಡಿ ಸೋಮಶೇಖರ್, ಖಜಾಂಚಿ ಟಿ.ಎಸ್. ಜಯರುದ್ರೇಶ್ ಹಾಗು ಇತರೆ ಪದಾಧಿಕಾರಿಗಳಾದ ಎಸ್.ಟಿ. ಕುಸುಮಶ್ರೇಷ್ಠಿ, ಕೆ. ಜಾವಿದ್, ಕಾಸಲ್ ಬದರಿನಾಥ್, ಅಂದನೂರು ಮುಪ್ಪಣ್ಣ, ಜಂಬಗಿ ರಾಧೇಶ್, ಬುಳ್ಳಾಪುರದ ಮಲ್ಲಿಕಾರ್ಜುನ ಸ್ವಾಮಿ, ಕೆ.ಜಿ.ಕೆ. ಬಸವರಾಜ್, ಐನಳ್ಳಿ ನಾಗರಾಜ್, ಬಿ.ಹೆಚ್. ಪ್ರಕಾಶ್, ಎಂ.ವಿ. ಶಶಿಧರ್ ಮತ್ತಿತರರು ಉಪಸ್ಥಿತರಿದ್ದರು.


## ಎರಡನೇ ವರ್ಷದ ಪುಣ್ಯಸ್ಮರಣೆ



**ದಿ|| ಜಿ.ಬಿ. ಪಾಲಾಕ್ಷಮ್ಮನವರು**

ಅಮ್ಮ ನೀವು ನಮ್ಮನ್ನಗಲಿ ಎರಡು ವರ್ಷಗಳಾದವು.
ಸದಾ ಹಸಿರಾಗಿರುವ ನಿಮ್ಮ ನೆನಪಿನಲ್ಲಿ ಹಾಗೂ ನಿಮ್ಮ ಮಾರ್ಗದಲ್ಲಿಯೇ ನಡೆಯುತ್ತಿರುವ

**ನಿಮ್ಮ ಮಗ, ಮಗಳು, ಸೊಸೆ ಹಾಗೂ ಮೊಮ್ಮಕ್ಕಳು**

**ಮೊ: 95917 59670**


# ಬಸ್ ನಿಲ್ಲಿಸುವಂತೆ ಕೊಮಾರನಹಳ್ಳಿ ಗ್ರಾಮಸ್ಥರಿಂದ ಆಗ್ರಹ



### ಮಲೇಬೆನ್ನೂರು

ಮಲೇಬೆನ್ನೂರು, ಜೂ. 22 - ಕೆ.ಎಸ್.ಆರ್.ಟಿ.ಸಿ ಬಸ್‌ಗಳನ್ನು ಕೊಮಾರನಹಳ್ಳಿ ಗ್ರಾಮದ ಮಧ್ಯಭಾಗದಲ್ಲಿರುವ ಸರ್ಕಲ್ ಬಳಿ ನಿಲ್ಲಿಸುವಂತೆ ಆಗ್ರಹಿಸಿ ಬುಧವಾರ ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಬಸ್ ತಡೆದು ಪ್ರತಿಭಟನೆ ಮಾಡಿದರು. ವಿಷಯ ತಿಳಿದ ತಕ್ಷಣ ಆಗಮಿಸಿದ ಎಎಸ್ಐ ಶ್ರೀನಿವಾಸ್ ಅವರು ಬಸ್‌ಗಳನ್ನು ಅವರ ಇಲಾಖೆ ನಿಗದಿ ಮಾಡಿದ ಸ್ಥಳಗಳಲ್ಲಿ ನಿಲ್ಲಿಸುತ್ತಾರೆ. ನೀವು ಹೋಗಿ ಮೇಲಾಧಿಕಾರಿಗಳಿಂದ ಇಲ್ಲಿಯೇ ಬಸ್ ನಿಲ್ಲಿಸುವ ಬಗ್ಗೆ ಆದೇಶ ಮಾಡಿಸಿಕೊಂಡು ಬನ್ನಿ ಎಂದು ಗ್ರಾಮಸ್ಥರ ಮನವೊಲಿಸಿ ಪ್ರತಿಭಟನೆ ತೆರವು ಮಾಡಿಸುವಲ್ಲಿ ಯಶಸ್ವಿಯಾದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಪ್ಲಾಸ್ಟಿಕ್ ಮುಕ್ತ ಭಾರತದ ಗುರಿ ಔಚಿತ್ಯಪೂರ್ಣ

## ದೃಶ್ಯ ಕಲಾ ವಿದ್ಯಾಲಯದಲ್ಲಿ ಎನ್‌ಎಸ್‌ಎಸ್ ಶಿಬಿರಕ್ಕೆ ಚಾಲನೆ ನೀಡಿದ ಡಾ. ಕೆ .ಶಿವಶಂಕರ್



ದಾವಣಗೆರೆ, ಜೂ.22- ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ರೂಪಿಸಿಕೊಳ್ಳಲು, ಸಹಬಾಳ್ವೆ, ಸಂಘಟನಾ ಚಾತುರ್ಯ ಹೆಚ್ಚಿಸಿಕೊಳ್ಳಲು ರಾಷ್ಟ್ರೀಯ ಸೇವಾ ಯೋಜನೆ ಶಿಬಿರಗಳು ಸಹಕಾರಿ ಎಂದು ದಾವಿವಿ ಪರೀಕ್ಷಾಂಗ ಕುಲಸಚಿವ ಡಾ.ಕೆ.ಶಿವಶಂಕರ್ ಅಭಿಪ್ರಾಯಿಸಿದರು.

ದಾವಿವಿಯ ರಾಷ್ಟ್ರೀಯ ಸೇವಾ ಯೋಜನಾ ವಿಭಾಗ ಹಾಗೂ ದೃಶ್ಯ ಕಲಾ ಮಹಾವಿದ್ಯಾಲಯ ಇವುಗಳ ಸಹಯೋಗದಲ್ಲಿ ಇದೇ ದಿನಾಂಕ 19 ರಿಂದ 26 ರವರೆಗೆ 'ಸ್ವಚ್ಛ ಭಾರತ ಆಂದೋಲನ ಮತ್ತು ಪ್ಲಾಸ್ಟಿಕ್ ಮುಕ್ತ ಭಾರತ' ಘೋಷಣೆಯೊಂದಿಗೆ ಆರಂಭಗೊಂಡ ಶಿಬಿರಕ್ಕೆ ಅವರು ಚಾಲನೆ ನೀಡಿ ಮಾತನಾಡಿದರು.

ಪ್ರಸ್ತುತ ಶಿಬಿರವು ಪ್ಲಾಸ್ಟಿಕ್ ಮುಕ್ತ ಭಾರತದ ಗುರಿ ಹೊಂದಿರುವುದು ಬಹಳ ಔಚಿತ್ಯಪೂರ್ಣ. ಏಕೆಂದರೆ ಇಂದು ಪ್ಲಾಸ್ಟಿಕ್ ಬಳಕೆ ಮಿತಿ ಮೀರಿ ಪರಿಸರಕ್ಕೆ, ಜೀವ ಜಲದ ಉಳಿವಿಗೆ ಮಾರಕವಾಗಿದೆ. ಹಾಗಾಗಿ ಈ ಶಿಬಿರದ ಮೂಲಕ ನೀವು-ನಾವೆಲ್ಲರೂ ನಮ್ಮಗಳ ಕೈಯಲ್ಲಿ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಮಟ್ಟಿಗೆ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡೋಣ ಎಂದು ಸಂಕಲ್ಪಬದ್ಧರಾಗಿ ನಡೆಯೋಣ ಎಂದು ಡಾ. ಕೆ .ಶಿವಶಂಕರ್ ನುಡಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ದಾವಿವಿ ಕಲಾ ನಿಕಾಯದ ಡೀನ್ ಡಾ. ವೆಂಕಟರಾವ್ ಪಲಾಟೆ ಮಾತನಾಡಿ, ರಾ.ಸೇ. ಯೋಜನೆ ಮುಖ್ಯ ಉದ್ದೇಶ ಭಾರತೀಯ ಕಾಲೇಜು ವಿದ್ಯಾರ್ಥಿಗಳಲ್ಲಿ ರಾಷ್ಟ್ರಭಕ್ತಿ, ಸಹಬಾಳ್ವೆ, ಸೇವಾ ಮನೋಭಾವನೆಯಂತಹ ಉತ್ತಮ ಮೌಲ್ಯಗಳನ್ನು ಬಿತ್ತುವುದಾಗಿದೆ. ವಿದ್ಯಾರ್ಥಿಗಳು ಶಿಬಿರದ ಚಟುವಟಿಕೆಗಳಲ್ಲಿ ಪಾಲ್ಗೊಂಡು ತರಬೇತಿ ಪಡೆಯಬೇಕು, ಈ ಶಿಬಿರ ಬೆಳಕಿನ ಕಿರಣ ಹೊಮ್ಮಿಸುವಂತಾಗಲಿ ಎಂದು ಆಶಿಸಿದರು.

ಎನ್. ಎಸ್. ಎಸ್ ರಾಜ್ಯ ಪ್ರಶಸ್ತಿ ಪುರಸ್ಕೃತ ಡಾ.ಪರಶುರಾಮ ಖಟಾವಕರ್ ಶಿಬಿರಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಅಶೋಕಕುಮಾರ ವಿ.ಪಾಳೇದ ರಾ.ಸೇ.ಯೋಜನೆ ಆರಂಭವಾದ ಹಿನ್ನೆಲೆ, ಉದ್ದೇಶ, ಔಚಿತ್ಯವನ್ನು ಶಿಬಿರಾರ್ಥಿಗಳಿಗೆ ಪರಿಚಯಿಸಿದರು.

ದೃಶ್ಯ ಕಲಾ ಮಹಾವಿದ್ಯಾಲಯದ ಸಂಯೋಜನಾಧಿಕಾರಿ ಡಾ.ಸತೀಶ್ ಕುಮಾರ್ ಪಂಚಪ್ಪ ವಲ್ಲೇಪುರೆ ಅಧ್ಯಕ್ಷತೆ ವಹಿಸಿದ್ದರು. ದೃಶ್ಯ ಕಲಾ ಮಹಾ ವಿದ್ಯಾಲಯದ ರಾ. ಸೇ.ಯೋ. ಘಟಕದ ಕಾರ್ಯಕ್ರಮ ಅಧಿಕಾರಿ ಡಾ. ಜೈರಾಜ್ ಚಿಕ್ಕ ಪಾಟೀಲ್ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ದೃಶ್ಯ ಕಲಾ ಮಹಾವಿದ್ಯಾಲಯದ ಬೋಧನಾ ಸಹಾಯಕ ದತ್ತಾತ್ರೇಯ ಎನ್. ಭಟ್ಟ ವಂದಿಸಿದರು.

ಶಿಬಿರದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿ ಕು.ಮುರಳಿ ಕೃಷ್ಣ ಆರಂಭದಲ್ಲಿ ಪ್ರಾರ್ಥನೆ ಗೀತೆ ಹಾಡಿದರು. ವಿದ್ಯಾರ್ಥಿನಿ ಕು.ಕೀರ್ತನಾ ಅಲ್ಫೋನ್ಸಾ ಕಾರ್ಯಕ್ರಮ ನಿರೂಪಿಸಿದರು.

ಶಿಬಿರದ ಪದಾಧಿಕಾರಿಗಳಾದ ಡಾ.ಎಂ. ಕೆ.ಗಿರೀಶ್ ಕುಮಾರ್, ಡಾ.ಸಂತೋಷ ಕುಮಾರ್ ಕುಲಕರ್ಣಿ, ಪ್ರಮೋದ್ ಕೆ.ವಿ, ಹರೀಶ್ ಎಸ್. ಎಚ್, ಶಿವಶಂಕರ್ ಸುತಾರ್, ಡಿ.ಎಚ್. ಸುರೇಶ್, ರಂಗನಾಥ್ ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು.

# ಕೇಂದ್ರ ಸರ್ಕಾರದಿಂದ ಸಿಗದ ಅಕ್ಕಿ



**ದೇವರು ಬೇಗ ದಾರಿ ತೋರಿಸಲಿ ಎಂದ ಸಚಿವ ಮುನಿಯಪ್ಪ**

ಬೆಂಗಳೂರು, ಜೂ. 22 - ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರದಲ್ಲಿ ಅಕ್ಕಿ ದೊರೆಯದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ ಬರಿಗೈನಲ್ಲಿ ಹಿಂದಿರುಗಿದ್ದಾರೆ.

ಕೇಂದ್ರ ಸರ್ಕಾರದ ಮನವೊಲಿಸಿ ಅಕ್ಕಿ ತರುವ ಉದ್ದೇಶದಿಂದ ಮುಖ್ಯಮಂತ್ರಿ ಅವರು ಎರಡು ದಿನಗಳ ದೆಹಲಿ ಪ್ರವಾಸ ಕೈಗೊಂಡಿದ್ದರೂ ಉದ್ದೇಶ ಈಡೇರದೇ ರಾಜ್ಯಕ್ಕೆ ಮರಳಿದ್ದಾರೆ.

ಆಹಾರ ಮತ್ತು ನಾಗರಿಕ ಸರಬರಾಜು ನೋಡಿಕೊಳ್ಳುವ ಪಿಯೂಷ್ ಗೋಯಲ್ ತಮ್ಮ ಭೇಟಿಗೂ ಅವಕಾಶ ನೀಡದೆ, ಮುನಿಯಪ್ಪ ಅವರು ಬರಿಗೈಯ್ಯಲ್ಲಿ ಬರುವಂತಾಗಿದೆ. ಕಳೆದ ಮೂರು ದಿನಗಳ ಹಿಂದೆಯೇ ದೆಹಲಿಯಲ್ಲಿ ಬಿಡಾರ ಹೂಡಿ ಕೇಂದ್ರ ಸಚಿವರ ಭೇಟಿಗೆ ಅವಕಾಶಕ್ಕಾಗಿ ಕಾದಿದ್ದರು. ಮುನಿಯಪ್ಪ ಅವರಿಗೆ ಸಮಯಾವಕಾಶ ನೀಡಲೇ ಇಲ್ಲ.

ಪಿಯೂಷ್ ಗೋಯಲ್ ಅವರ ನಡವಳಿಕೆಯ ಬಗ್ಗೆ ದೆಹಲಿಯಲ್ಲೇ ಇದ್ದ ಮುಖ್ಯಮಂತ್ರಿ ಅವರಿಗೆ ಮಾಹಿತಿ ನೀಡಿ ಭತ್ತ ಬೆಳೆಯುವ ರಾಜ್ಯಗಳ ಜೊತೆ ಸಂಪರ್ಕ ಬೆಳೆಸಿ ಸಮಾಲೋಚನೆ ನಡೆಸಿದರು.

ಇದರ ಮಧ್ಯೆ ಮುಖ್ಯಮಂತ್ರಿ ಅವರು ನಿನ್ನೆ ರಾತ್ರಿ ಕೇಂದ್ರ ಗೃಹ ಸಚಿವ ಅಮಿತ್‌ಷಾ ಅವರನ್ನು ಭೇಟಿಯಾಗಿ ಅನ್ನಭಾಗ್ಯ ಯೋಜನೆಗೆ ಮಾಸಿಕ 2.28 ಲಕ್ಷ ಮೆ.ಟನ್ ಅಕ್ಕಿ ಪೂರೈಸುವಂತೆ ಮನವಿ ಮಾಡಿದರು.

ಇದಕ್ಕೆ ಸರಿಯಾಗಿ ಸ್ಪಂದಿಸದ ಷಾ ಸಂಬಂಧಪಟ್ಟ ಸಚಿವರೊಂದಿಗೆ ಸಮಾಲೋಚಿಸುವುದಾಗಿ ಹೇಳಿದ್ದಾರೆ. ಕೇಂದ್ರ ಸರ್ಕಾರ ನಮ್ಮ ಬೇಡಿಕೆ ಈಡೇರಿಸುವುದಿಲ್ಲ ಎಂಬುದು ಮನದಟ್ಟಾಗುತ್ತಿದ್ದಂತೆ, ಉತ್ತರ ಭಾರತದಲ್ಲಿ ಭತ್ತ ಬೆಳೆಯುವ ರಾಜ್ಯಗಳನ್ನು ಸಂಪರ್ಕಿಸಿ, ಪಂಜಾಬ್ ಮತ್ತು ಛತ್ತೀಸ್‌ಘಡಗಳಿಂದ ಅಕ್ಕಿ ಖರೀದಿ ಕುರಿತಂತೆ ನಡೆಸಿರುವ ಮಾತುಕತೆ ಒಂದಷ್ಟು ಯಶಸ್ವಿಯಾಗಿದೆ. ಆದರೆ, ಅವೆರಡೂ ರಾಜ್ಯಗಳು ಇಡೀ ವರ್ಷ ಕರ್ನಾಟಕ್ಕೆ ಬೇಕಾಗುವ ಅಕ್ಕಿ ಸರಬರಾಜು ಮಾಡುವುದಿಲ್ಲ. ಒಂದೆರಡು ತಿಂಗಳಿಗಷ್ಟೇ ಸೀಮಿತ ಎಂದು ಹೇಳಿದ್ದಾರೆ. ಅಲ್ಲದೆ, ಅಲ್ಲಿನ ಅಕ್ಕಿಯೂ ದುಬಾರಿ ಹಾಗೂ ಸಾಗಾಣಿಕೆ ವೆಚ್ಚವೂ ಹೆಚ್ಚು.

ಇದು ರಾಜ್ಯ ಸರ್ಕಾರಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಆಂಧ್ರ ಪ್ರದೇಶ ಮತ್ತು ತೆಲಂಗಾಣ ಈಗ ಅಕ್ಕಿ ಬದಲು ಭತ್ತ ನೀಡುವುದಾಗಿ ಹೇಳಿವೆ. ಆದರೂ ಅದಕ್ಕೆ ಅಂತಿಮ ಸ್ವರೂಪ ಬಂದಿಲ್ಲ.

ಅಕ್ಕಿ ಗೊಂದಲ ಪರಿಹರಿಸಲು ಮತ್ತು ಒಂದು ನಿರ್ಣಯ ಕೈಗೊಳ್ಳಲು ಜೂನ್ 28ರಂದು ಸಂಪುಟ ಸಭೆ ಕರೆದಿದ್ದಾರೆ. ಅಂದು ಮಹತ್ವದ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ.

ಈನಡುವೆಪತ್ರಕರ್ತರೊಂದಿಗೆ ಮಾತನಾಡಿರುವ ಆಹಾರ ಸಚಿವ ಮುನಿಯಪ್ಪ, ಕೇಂದ್ರ ಸಚಿವ ಗೋಯಲ್ ಅವರನ್ನು ಭೇಟಿ ಮಾಡಲು ಸಾಧ್ಯವಾಗಿಲ್ಲ. ದೇವರು ಆದಷ್ಟು ಬೇಗ ದಾರಿ ತೋರಿಸಲಿ ಎಂದು ಪ್ರಾರ್ಥನೆ ಮಾಡಿದ್ದೇನೆ ಎಂದರು.

ಏನೇ ಆದರೂ ನಮ್ಮ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ. ಜುಲೈ 1ರಿಂದ ಅಕ್ಕಿ ಕೊಡಲು ಸಮಸ್ಯೆ ಆಗಬಹುದು. ಆದರೆ, ಆಗಸ್ಟ್ 1ರ ಒಳಗೆ ಅಕ್ಕಿ ಕೊಟ್ಟೇ ಕೊಡುತ್ತೇವೆ ಎಂದರು.

ಈ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಕ್ಕಿ ವಿತರಣೆ ಬಗ್ಗೆ ರಾಜಕೀಯ ಅಥವಾ ದ್ವೇಷದ ರಾಜಕಾರಣ ಮಾಡುವುದು ಬೇಡ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಗೆ ತಿಳಿಸಿದ್ದೇನೆ ಎಂದಿದ್ದಾರೆ.

ಎಫ್‌ಸಿಐ ಅಕ್ಕಿ ನೀಡುವ ವಿಚಾರದಲ್ಲಿ ಒಪ್ಪಿಗೆ ನೀಡಿ, ಮರುದಿನವೇ ಅಕ್ಕಿ ವಿತರಣೆಯನ್ನು ರಾಜ್ಯಗಳಿಗೆ ಸ್ಥಗಿತಗೊಳಿಸಿರುವ ವಿಚಾರವನ್ನೂ ಅವರ ಗಮನಕ್ಕೆ ತಂದಿದ್ದೇನೆ.

ಷಾ ಅವರು, ಸಂಬಂಧಪಟ್ಟ ಮಂತ್ರಿಗಳಿಗೆ ಮಾತನಾಡುತ್ತೇನೆ ಎಂದು ಭರವಸೆ ನೀಡುತ್ತೇನೆ ನೋಡೋಣ ಎಂದರು.

## ಮೈಸೂರಿನಲ್ಲಿ ಬಿಸಿಯೂಟ ತಯಾರಕರ ಸಭೆ

ದಾವಣಗೆರೆ, ಜೂ. 22- ಎಐಟಿಯುಸಿ ಸಂಯೋಜಿತ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಸಮಿತಿ ಸದಸ್ಯರ ಸಭೆ ಇದೇ ದಿನಾಂಕ 24ರ ಶನಿವಾರ ಮೈಸೂರಿನಲ್ಲಿ ನಡೆಯಲಿದೆ ಎಂದು ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು ತಿಳಿಸಿದ್ದಾರೆ.

ಫೆಡರೇಷನ್‌ನ ರಾಜ್ಯಾಧ್ಯಕ್ಷ ಹೊನ್ನಪ್ಪ ಮರೆಮ್ಮನವರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಭೆಯಲ್ಲಿ ಬಿಸಿಯೂಟ ತಯಾರಕರ ಅನೇಕ ಸಮಸ್ಯೆಗಳ ಬಗ್ಗೆ ಹಾಗೂ ಮುಂದಿನ ಹೋರಾಟಗಳ ಬಗ್ಗೆ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

# ಕದಳಿ ವೇದಿಕೆಯ 145ನೇ ದತ್ತಿ ಉಪನ್ಯಾಸ



ದಾವಣಗೆರೆ, ಜೂ. 22- ಶರಣ ಸಾಹಿತ್ಯ ಪರಿಷತ್ತಿನ ಅಂಗ ಸಂಸ್ಥೆಯಾದ ಕದಳಿ ಮಹಿಳಾ ವೇದಿಕೆಯ 145ನೇ ಕದಳಿ ಕಮ್ಮಟದಲ್ಲಿ ದತ್ತಿ ಉಪನ್ಯಾಸ, ಪರಿಸರ ದಿನಾಚರಣೆ, ಅಂಬಿಗರ ಚೌಡಯ್ಯನವರ ಮತ್ತು ಕುಂಬಾರ ಗುಂಡಯ್ಯನವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಆಂಜನೇಯ ಬಡಾವಣೆಯಲ್ಲಿರುವ ಯೋಗ ಹಾಲ್‌ನಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸ್ತ್ರೀರೋಗ ತಜ್ಞರು ಹಾಗೂ ಕಸರಸ ಅಭಿಯಾನದ ಅಧ್ಯಕ್ಷರಾದ ಡಾ. ಶಾಂತಾಭಟ್ ಅವರು ಮನೆಯಲ್ಲೇ ಕಿತ್ತಲೆ, ನಿಂಬೆ, ಮೋಸಂಬಿ, ಪೈನಾಪಲ್ ಹಣ್ಣಿನ ಸಿಪ್ಪೆಗಳಿಂದ ತಯಾರಿಸುವ ಹ್ಯಾಂಡ್ ವಾಶ್, ಶಾಂಪು, ಸಿಂಕ್ ಕ್ಲೀನರ್, ಬಾತ್ರೂಮ್ ಕ್ಲೀನರ್ ಎಲ್ಲವನ್ನು ಸ್ವಚ್ಛ ಮಾಡಬಹುದಾದ ದ್ರಾವಣವನ್ನು ಪ್ರಾತ್ಯಕ್ಷಿಕೆ ಮೂಲಕ ತಯಾರಿಸಿ ತೋರಿಸಿದರು.

ಜಿಲ್ಲಾ ಅಧ್ಯಕ್ಷರಾದ ವಿನೋದ ಅಜಗಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾಜಿ ಮಹಾಪೌರ ಎಸ್.ಟಿ. ವೀರೇಶ್, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ದತ್ತಿದಾನಿಗಳ ಪರವಾಗಿ ಗಾಯತ್ರಿ ಸುಭಾಷ್ ಆಗಮಿಸಿದ್ದರು.

ವೀರೇಶ್ ಅವರು ಪರಿಸರದ ಬಗ್ಗೆ ಮಾತನಾಡಿ, ಇಂತಹ ಪರಿಸರ ಸ್ನೇಹಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಕದಳಿ ಸದಸ್ಯರು ಪ್ರಾರ್ಥಿಸಿದರು. ಮಮತಾ ನಾಗರಾಜ್ ಸ್ವಾಗತಿಸಿದರು. ವಾಣಿ ರಾಜ್ ಲಿಂ. ಡಾ. ಶಶಿಕಲಾ ದತ್ತಿ, ಲಿಂ. ಮಾಗನೂರು ರಾಜಶೇಖರಗೌಡ ದತ್ತಿ, ಭೀಮಸಮುದ್ರದ ಲಿಂ. ಹಾಲಮ್ಮ ಜಿ. ಮಲ್ಲಿಕಾರ್ಜುನಪ್ಪ ದತ್ತಿ ಮತ್ತು ದತ್ತಿದಾನಿಗಳಾದ ಶ್ರೀಮತಿ ಗಿರಿಜಮ್ಮ ಸೋಮಶೇಖರಗೌಡ, ಶ್ರೀಮತಿ ಸುಲೋಚನಾ ರಾಜಶೇಖರ್ ಹಾಗೂ ಶ್ರೀ ಪ್ರಸನ್ನಕುಮಾರ್, ಭೀಮಸಮುದ್ರ ಇವರ ಪರಿಚಯವನ್ನು ಮಾಡಿದರು. ವಿನೋದ ಅಜಗಣ್ಣನವರು ಅಧ್ಯಕ್ಷೀಯ ನುಡಿಗಳಲ್ಲಿ ಪರಿಸರ ಜಾಗೃತಿ ಬಗ್ಗೆ ಹಾಗೂ ಅಂಬಿಗರ ಚೌಡಯ್ಯ ಮತ್ತು ಕುಂಬಾರ ಗುಂಡಯ್ಯನವರ ಬಗ್ಗೆ ಹೇಳಿದರು. ಸೌಮ್ಯ ಸತೀಶ್ ನಿರೂಪಿಸಿದರು.

## ಸಾಧನೆಗೈದ ಯೋಗ ಪಟುಗಳಿಗೆ ಪ್ರಶಸ್ತಿ ಪ್ರದಾನ





ದಾವಣಗೆರೆ, ಜೂ.22- ಆವಿಯಾ ಇಂಟರ್‌ನ್ಯಾಷನಲ್ ಯೋಗ ಅಕಾಡೆಮಿ ವತಿಯಿಂದ ವಿಯೆಟ್ನಾಂನ ಹೊಚಿಮಿನ್ ನಗರದ ಫಸ್ಟ್ ಹೋಟೆಲ್ ಸಭಾಂಗಣದಲ್ಲಿ ಕಳೆದ ವಾರ ನಡೆದ ಅಂತರರಾಷ್ಟ್ರೀಯ ಯೋಗ ಟ್ಯಾಲೆಂಟ್ ಶೋ ಮತ್ತು ಆರ್ಟಿಸ್ಟಿಕ್ ಯೋಗ ಸ್ಪರ್ಧೆ ಕಾರ್ಯಕ್ರಮದಲ್ಲಿ ಆವಿಯಾದಿಂದ ಕೊಡಮಾಡುವ ಅಂತರರಾಷ್ಟ್ರೀಯ ಯೋಗ ಪದ್ಮ ಪ್ರಶಸ್ತಿಯನ್ನು ಭಾರತದ ಅಂತರರಾಷ್ಟ್ರೀಯ ಯೋಗಪಟು ಕು. ನೇಹ ಕೂರ್ಸೆ (ಬೆಂಗಳೂರು) ಅವರಿಗೆ ಆವಿಯಾ ಅಂತರ ರಾಷ್ಟ್ರೀಯ ಯೋಗ ಅಕಾಡೆಮಿ ಅಧ್ಯಕ್ಷ ಯೋಗಾಚಾರ್ಯ ವೈದ್ಯ ತೀರ್ಥರಾಜ್ ಹೋಲೂರ್ ಪ್ರದಾನ ಮಾಡಿದರು.

## 26 ರಂದು 'ಸಾವಯವ ಕೃಷಿಯಿಂದ ರೈತರ ಅಭಿವೃದ್ಧಿ' ಅರಿವು ಕಾರ್ಯಕ್ರಮ

ದಾವಣಗೆರೆ, ಜೂ. 22- ಭಾರತೀಯ ಕಿಸಾನ್ ಸಂಘ-ಕರ್ನಾಟಕ ಪ್ರದೇಶದ ವತಿಯಿಂದ ಇದೇ ದಿನಾಂಕ 26 ರ ಸೋಮವಾರ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಹೆಬ್ಬಾಳು ಗ್ರಾಮದ ವಿರಕ್ತ ಮಠದಲ್ಲಿ ಗೋ ಆಧಾರಿತ ಹಾಗೂ ಸಾವಯವ ಕೃಷಿಯಿಂದ ರೈತರ ಅಭಿವೃದ್ಧಿ ಮತ್ತು ಪಂಚ ಮಹಾಭೂತಗಳ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಿಸಾನ್ ಸಂಘದ ಜಿಲ್ಲಾ ಕಾರ್ಯದರ್ಶಿ ಕೆ.ಆರ್. ಧನಂಜಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರದ ಸಿದ್ಧಗಿರಿ ಮಠದ ಶ್ರೀ ಅದೃಷ್ಟ ಕಾಡು ಸಿದ್ಧೇಶ್ವರ ಸ್ವಾಮೀಜಿ ಹಾಗೂ ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಅಂದಿನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆಂದು ಹೇಳಿದರು. ಇದೇ ವೇಳೆ ರೈತರೊಂದಿಗೆ ಸಂವಾದ ಏರ್ಪಡಿಸಿದ್ದು, ಭಾಗವಹಿಸುವ ಪ್ರತಿಯೊಬ್ಬರಿಗೂ ಉಚಿತ ಗೋ ಕೃಪಾಮೃತ ವಿತರಣೆ ಮಾಡಲಾಗುವುದು ಎಂದರು.

ಈ ಕಾರ್ಯಕ್ರಮದ ಅಂಗವಾಗಿ ಇದೇ ದಿನಾಂಕ 25 ರಂದು ಭಾನುವಾರ ಸಂಜೆ 6 ಗಂಟೆಗೆ ಅಂತರ್ಜಲ ತಜ್ಞ ದೇವರಾಜ ರೆಡ್ಡಿ ಅವರು ಜಲ ಮರುಪೂರಣ ಹಾಗೂ ಮಳೆ ನೀರು ಕೊಯ್ಲು ಕುರಿತು ರೈತರಿಗೆ ತರಬೇತಿ ನೀಡಲಿದ್ದಾರೆ.

ಆಸಕ್ತ ರೈತರು ಎರಡು ದಿನ ಮುಂಚಿತವಾಗಿ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸುವ ಮೊಬೈಲ್ : 9886451, 9945269210. ರಾಜ್ಯ ಕಾಂಗ್ರೆಸ್ ಸರ್ಕಾರ ಅನ್ನಭಾಗ್ಯ ಯೋಜನೆಗಾಗಿ ರಾಜ್ಯದ ರೈತರಿಂದಲೇ ಅಕ್ಕಿ ಖರೀದಿ ಮಾಡಬೇಕು. ಇದರಿಂದ ರೈತರಿಗೂ ಆರ್ಥಿಕವಾಗಿ ಸಹಾಯವಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ನಡೆಸಬೇಕು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವೆಂಕಟೇಶ್ವರರಾವ್, ಚಿದಾನಂದಪ್ಪ, ಜಿ.ಟಿ. ಬಸವರಾಜ್, ನೇರ್ಲಿಗಿ ಪ್ರಕಾಶ್ ಉಪಸ್ಥಿತರಿದ್ದರು.

## ಗ್ಯಾರಂಟಿ ಕೊಡಿ, ಇಲ್ಲವೇ ಅಧಿಕಾರದಿಂದ ತೊಲಗಿ

**(1ನೇ ಪುಟದಿಂದ)** ದಾಸ್ತಾನು ನೋಡಿಕೊಳ್ಳುವ ಸಂಸ್ಥೆ ಮಾತ್ರ. ಕೇಂದ್ರ ಸರ್ಕಾರದಿಂದ ಅಕ್ಕಿ ಖರೀದಿಸಬೇಕಾದರೆ, ಸಂಬಂಧಿಸಿದ ಸಚಿವರ ಜೊತೆ ಮಾತನಾಡಬೇಕು. ವಾಚ್‌ಮನ್ ಜೊತೆ ಮಾತನಾಡಿದ್ದೇವೆ, ಅಕ್ಕಿ ಕೊಡಿ ಎಂಬ ರೀತಿಯಲ್ಲಿ ಕಾಂಗ್ರೆಸ್ ವರ್ತಿಸುತ್ತಿದೆ ಎಂದು ಹೇಳಿದರು.

ಪರಿಷತ್ ಸದಸ್ಯ ಎನ್. ರವಿಕುಮಾರ್ ಮಾತನಾಡಿ, ಬಿಜೆಪಿ ಮುಖಂಡರು ಏಳು ತಂಡಗಳಲ್ಲಿ 30 ಜಿಲ್ಲೆಗಳ ಪ್ರವಾಸ ಕೈಗೊಂಡಿದ್ದೇವೆ. ಗ್ಯಾರಂಟಿಗಳನ್ನು ಈಡೇರಿಸದ ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್, ಪರಿಷತ್ ಸದಸ್ಯ ನವೀನ್, ಮಾಜಿ ಸಚಿವ ಬಿ.ಸಿ. ನಾಗೇಶ್, ಮಾಜಿ ಶಾಸಕರಾದ ಎಸ್.ವಿ. ರಾಮಚಂದ್ರ, ಪ್ರೊ. ಲಿಂಗಣ್ಣ, ಎಂ.ಪಿ. ರೇಣುಕಾಚಾರ್ಯ, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಮುಖಂಡರಾದ ಅನಿಲ್ ಕುಮಾರ್, ಶಿವಕುಮಾರ್, ಸುಧಾ ಜಯರುದ್ರೇಶ್, ಯಶವಂತರಾವ್ ಜಾಧವ್, ಲೋಕಿಕೆರೆ ನಾಗರಾಜ್, ಬಿ.ಜಿ. ಅಜಯ್ ಕುಮಾರ್, ಶಾಂತರಾಜ್ ಪಾಟೀಲ್, ಕಲ್ಲೇಶ್, ಬಿ.ಎಸ್. ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

## ಬೀಡಿ ಕಾರ್ಮಿಕರ ಕನಿಷ್ಟ ಕೂಲಿ ಪರಿಷ್ಕರಿಸಬೇಕು

ದಾವಣಗೆರೆ, ಜೂ. 22- ಬೀಡಿ ಕಾರ್ಮಿಕರ ಕನಿಷ್ಟ ಕೂಲಿ ಪರಿಷ್ಕರಿಸಿ, ಬದುಕಲು ಅವರಿಗೆ ಯೋಗ್ಯ ಕೂಲಿಯನ್ನು ನಿಗದಿಗೊಳಿಸುವಂತೆ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಸರ್ಕಾರವನ್ನು ಒತ್ತಾಯಿಸಿದೆ. ಲಕ್ಷಾಂತರ ಸಂಖ್ಯೆಯಲ್ಲಿರುವ ಬಡ ಬೀಡಿ ಕಾರ್ಮಿಕರು ಕನಿಷ್ಟ ಕೂಲಿ ಇಲ್ಲದೇ ಪರಿತಪಿಸುವಂತಾಗಿದೆ ಎಂದು ಸಂಘಟನೆಯ ಜಿಲ್ಲಾ ಸಂಚಾಲಕ ಅಶ್ಫಾಕ್ ಅಹಮದ್ ಹಾಗೂ ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜ್ ತಿಳಿಸಿದ್ದಾರೆ. ಕೂಡಲೇ ಬೀಡಿ ಕಾರ್ಮಿಕರ ಕನಿಷ್ಟ ವೇತನವನ್ನು ಪರಿಷ್ಕರಣೆಗೆ ಒಳಪಡಿಸುವಂತೆ ಆಗ್ರಹಿಸಿದ್ದಾರೆ.

## ಮಾತಾ ಪಬ್ಲಿಕ್ ಶಾಲೆಯಲ್ಲಿ ಯೋಗ ದಿನ



**ರಾಣೇಬೆನ್ನೂರು**

ರಾಣೇಬೆನ್ನೂರು, ಜೂ.22- ಶಹರದ ಚೋಳಮರಡೇಶ್ವರ ನಗರದ ಲ್ಲಿರುವ ಮಾತಾ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಶಾಲಾ ವ್ಯವಸ್ಥಾಪಕ ಚನ್ನಬಸಪ್ಪ ಮಾತನಾಡಿ, ಪ್ರತಿ ದಿನ ಯೋಗ ಮಾಡುವುದರಿಂದ ತಾಳ್ಮೆ, ಶಾಂತಿ, ಜ್ಞಾನ, ಉತ್ತಮ ಆರೋಗ್ಯ, ಉತ್ತಮ ಬೆಳವಣಿಗೆ ಹೀಗೆ ಹಲವಾರು ಉಪಯೋಗಗಳನ್ನು ಕಾಣಬಹುದು ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಲತಾ ಸಿ.ಎಸ್, ಆಶಾ, ದೀಪಾ, ಗೀತಾ, ಪುಷ್ಪಾ, ಚೈತ್ರಾ, ದುರ್ಗಮ್ಮ ಹಾಗೂ ನಾಗೇಂದ್ರ, ಪ್ರವೀಣ ಮತ್ತಿತರರು ಪಾಲ್ಗೊಂಡಿದ್ದರು.

## ಮಹಿಳೆಯರ ಹಾಸ್ಟೆಲ್ ಪ್ರವೇಶ ಪ್ರಾರಂಭ

ದಾವಣಗೆರೆ, ಜೂ.22- ಸ್ಥಳೀಯ ಸರಸ್ವತಿ ನಗರದಲ್ಲಿರುವ ಬಸವ ಮಹಾಮನೆಯಿಂದ ಬಸವ ಬಳಗ ಪ್ರಸಾದ ಮತ್ತು ವಸತಿ ನಿಲಯ ವಿದ್ಯಾರ್ಥಿನಿಯರ ಪ್ರಸಾದ ನಿಲಯ (ಹಾಸ್ಟೆಲ್) ಪ್ರಾರಂಭವಾಗಿದೆ. ಆಸಕ್ತ ವಿದ್ಯಾರ್ಥಿನಿಯರು ವಿವರಗಳಿಗೆ 7337737884, 9880555916 ಸಂಖ್ಯೆಗಳಿಗೆ ಸಂಪರ್ಕಿಸಲು ವಾರ್ಡನ್ ಪಿ.ಎಂ. ಮಹಾರುದ್ರ ತಿಳಿಸಿದ್ದಾರೆ.

# ಜೆಇಇ : ಹೈದರಾಬಾದ್ ಮಾದರಿ ಆದೀತು ದುಬಾರಿ

ಎಸ್.ಎ. ಶ್ರೀನಿವಾಸ್

ದೇಶದ ಉನ್ನತ ಇಂಜಿನಿಯರಿಂಗ್ ಸಂಸ್ಥೆಗಳಾದ ಐ.ಐ.ಟಿ.ಗಳಿಗೆ ಪ್ರವೇಶ ನೀಡುವ ಸಲುವಾಗಿ ನಡೆಸಲಾಗುವ ಜೆಇಇ - ಅಡ್ವಾನ್ಸ್‌ಡ್ ಪರೀಕ್ಷೆಯ ಫಲಿತಾಂಶ ಕಳೆದ ವಾರ ಪ್ರಕಟವಾಗಿತ್ತು. ಹೈದರಾಬಾದ್ ವಲಯ ಫಲಿತಾಂಶದಲ್ಲಿ ಮುಂಚೂಣಿಯಲ್ಲಿತ್ತು.

ಏಳು ವಲಯಗಳಲ್ಲಿ ಒಟ್ಟು 43,773 ಅಭ್ಯರ್ಥಿಗಳು ಅರ್ಹತೆ ಪಡೆದುಕೊಂಡಿದ್ದರು. ಈ ಪೈಕಿ ಹೈದರಾಬಾದ್ ವಲಯದ ಅತಿ ಹೆಚ್ಚಿನ 10,432 ಅಭ್ಯರ್ಥಿಗಳು ಅರ್ಹತೆ ಪಡೆದುಕೊಂಡಿದ್ದಾರೆ. ಅಲ್ಲದೇ ಮೊದಲ 500 ಸ್ಥಾನಗಳಲ್ಲಿ ಹೈದರಾಬಾದ್ ವಲಯದ 174 ಅಭ್ಯರ್ಥಿಗಳಿದ್ದರು. ಮೊದಲ ಹತ್ತು ಸ್ಥಾನಗಳಲ್ಲಿ ಆರು ಈ ವಲಯಕ್ಕೆ ದೊರೆತಿದ್ದವು.

ಆಂಧ್ರ ಪ್ರದೇಶದಲ್ಲಿ ಶೇ.76 ಹಾಗೂ ತೆಲಂಗಾಣದಲ್ಲಿ ಶೇ.65ರಷ್ಟು ವಿದ್ಯಾರ್ಥಿಗಳು ವಿಜ್ಞಾನ ವಿಷಯವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಜೆಇಇ ಪರೀಕ್ಷೆಯ ಬಗ್ಗೆ ಈ ವಲಯದಲ್ಲಿ ಮೊದಲಿನಿಂದಲೂ ಆಸಕ್ತಿ ಹೆಚ್ಚಾಗಿದೆ. ಹೀಗಾಗಿ ಅತಿ ಹೆಚ್ಚಿನ ಸೀಟುಗಳು ಈ ವಲಯಕ್ಕೆ ಸಿಗುವುದರಲ್ಲಿ ಅಚ್ಚರಿಯೇನೂ ಇಲ್ಲ.

ಆದರೆ, ಹೈದರಾಬಾದ್ ಹಾಗೂ ಆಂಧ್ರ ಪ್ರದೇಶಗಳಲ್ಲಿ ಜೆ.ಇ.ಇ. ಸ್ಪರ್ಧೆಗೆ ನೀಡಲಾಗುವ ತರಬೇತಿಯ ಬಗ್ಗೆ ಹಲವರು ಕಳವಳ ವ್ಯಕ್ತಪಡಿಸುತ್ತಿದ್ದಾರೆ. ತರಬೇತಿ ಅತ್ಯಂತ ಕಠಿಣವಾಗಿದೆ. ಇದು ವಿದ್ಯಾರ್ಥಿಗಳಿಗೆ ಹೊರೆಯಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಎರಡನೇ ಪಿ.ಯು.ಸಿ.ಗೆ ಬರುವ ಜೆ.ಇ.ಇ. ಪರೀಕ್ಷೆಗಾಗಿ 6-8ನೇ ತರಗತಿಯಿಂದಲೇ ತರಬೇತಿ ನೀಡಲಾಗುತ್ತಿದೆ. ಕೇವಲ ಒಂದು ಪರೀಕ್ಷೆ ಉತ್ತೀರ್ಣರಾಗಲು ವಾರದ ಆರೂವರೆ ದಿನ ಅಧ್ಯಯನದಲ್ಲಿ ತೊಡಗಿಸಲಾಗುತ್ತಿದೆ ಎಂದು ಐ.ಐ.ಟಿ. ಹೈದರಾಬಾದ್‌ನ ಸಹ ಅನ್ವೇಷಕ ಉಪನ್ಯಾಸಕ ರಮೇಶ್ ಲೋಕನಾಥನ್ ಹೇಳಿದ್ದಾರೆ.

ಆಟವಿಲ್ಲ, ಕಥೆ ಓದುವುದಿಲ್ಲ, ಸಂಗೀತವಿಲ್ಲ... ಕೇವಲ ಓದು. ಇದೆಲ್ಲವನ್ನೂ ಸಾಮಾನ್ಯ ಎಂದು ಪರಿಗಣಿಸಲಾದೀತೇ? ಎಂದು ಲೋಕನಾಥನ್ ಪ್ರಶ್ನಿಸಿದ್ದಾರೆ.

ಐ.ಐ.ಟಿ.ಗೆ ಪ್ರವೇಶ ಪಡೆಯಲಿಕ್ಕಾಗಿಯೇ ವಿದ್ಯಾರ್ಥಿಗಳು ಅತಿಯಾದ ಪರಿಶ್ರಮ ಹಾಕಿರುತ್ತಾರೆ. ಐ.ಐ.ಟಿ.ಗೆ ಕಾಲಿಡುವುದರಲ್ಲಿ ವಿದ್ಯಾರ್ಥಿಗಳು ಹೈರಾಣಾಗಿ ಹೋಗಿರುತ್ತಾರೆ. ಇದಕ್ಕೆಲ್ಲಾ ಕೋಚಿಂಗ್ ಒತ್ತಡವೇ ಕಾರಣ ಎಂದವರು ಹೇಳಿದ್ದಾರೆ.

ನಾವು ನೋಡುತ್ತಿರುವಂತೆ, ಕೋಚಿಂಗ್ ಕಾರಣದಿಂದ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ರ್‍ಯಾಂಕ್ ಶೇ.10ರಷ್ಟು ಹೆಚ್ಚಾಗುತ್ತದೆ. 10 ಸಾವಿರದ ಶ್ರೇಯಾಂಕಕ್ಕೆ ಬರುವ ವಿದ್ಯಾರ್ಥಿ 7ರಿಂದ 8 ಸಾವಿರದ ಹಂತಕ್ಕೆ ಬರಲು ಸಾಧ್ಯ ಎಂದವರು ಹೇಳಿದ್ದಾರೆ.

ಆದರೆ, ಕೋಚಿಂಗ್ ಸಂಸ್ಥೆಗಳಿಗೆ ಇಷ್ಟಕ್ಕೇ ತೃಪ್ತಿ ಇಲ್ಲ. ಮೊದಲ ಸಾವಿರ ರ್‍ಯಾಂಕಿಂಗ್‌ಗಳ ಮೇಲೆ ಅವರ ಕಣ್ಣು. ಹೀಗಾಗಿ ಅವರು ಟಾಪರ್‌ಗಳನ್ನು ಪಡೆಯಲು ಒತ್ತಡ ಹೇರುತ್ತಿದ್ದಾರೆ.

ಕೋಚಿಂಗ್ ಕ್ಲಾಸ್‌ಗಳ ಹಾವಳಿ ಕೇವಲ ಆಂಧ್ರ ಹಾಗೂ ತೆಲಂಗಾಣಕ್ಕೆ ಸೀಮಿತವಾಗಿಲ್ಲ. ರಾಜಸ್ಥಾನದ ಕೋಟಾದಲ್ಲೂ ಇದೇ ಪರಿಸ್ಥಿತಿ ಇದೆ. ಇಲ್ಲಿನ ಪಿ.ಯು. ತರಗತಿಗಳು ನೆಪ ಮಾತ್ರಕ್ಕೆ ಇರುತ್ತವೆ. ಪೂರ್ಣ ಗಮನ ಜೆಇಇ ಹಾಗೂ ನೀಟ್ ಪರೀಕ್ಷೆಯ ಮೇಲಿರುತ್ತದೆ.

ಈ ರೀತಿಯ ತರಬೇತಿ ಸಮಸ್ಯೆ ತರುತ್ತದೆ. ಐ.ಐ.ಟಿ. ರ್‍ಯಾಂಕ್‌ಗಾಗಿ ಒತ್ತಡ ಹೇರಲಾಗುತ್ತದೆ. ಮತ್ತೊಂದೆಡೆ ಥಿಯರಿ ಕಲಿಕೆಗೆ ಯಾವುದೇ ಪ್ರೋತ್ಸಾಹ ಸಿಗುತ್ತಿಲ್ಲ. ಇದರಿಂದಾಗಿ ಕಲಿಕೆಯ ಮೂಲ ಆಧಾರಕ್ಕೆ ಧಕ್ಕೆಯಾಗುತ್ತಿದೆ ಎಂಬ ಅಭಿಪ್ರಾಯಗಳೂ ಇವೆ.

ಮೂಲಭೂತ ಕಲಿಕೆಯಲ್ಲೇ ಕೊರತೆ ಇರುವ ಕಾರಣ, ಜೆ.ಇ.ಇ. ಕೋಚಿಂಗ್ ಮೂಲಕ ಸೇರ್ಪಡೆಯಾಗುವ ಬಹುತೇಕ ವಿದ್ಯಾರ್ಥಿಗಳು ಮೊದಲ ವರ್ಷದಲ್ಲಿ ಗಣಿತ ಹಾಗೂ ಭೌತಶಾಸ್ತ್ರದಲ್ಲಿ ಹಿಂದೆ ಬೀಳುತ್ತಾರೆ.

ಕೋಚಿಂಗ್ ಕ್ಲಾಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಎಲ್ಲ ವಿಷಯಗಳನ್ನು ಸರಳಗೊಳಿಸಿ ತಿಳಿಸಲಾಗುತ್ತದೆ. ಆದರೆ, ಐ.ಐ.ಟಿ.ಗಳಲ್ಲಿ ಈ ರೀತಿಯ ಕಲಿಕೆ ಸಿಗುವುದಿಲ್ಲ. ಸಂಕೀರ್ಣ ಪರಿಕಲ್ಪನೆಗಳನ್ನು ಕಲಿಯಬೇಕಾಗುತ್ತದೆ. ಸಂಶೋಧನೆ ಹಾಗೂ ಸ್ವಯಂ ಕಲಿಕೆಗೆ ಒತ್ತು ನೀಡಲಾಗುತ್ತದೆ ಎಂದು ಜೆಇಇ/ನೀಟ್ ಅಧ್ಯಯನ ವೇದಿಕೆಯ ಲಲಿತ್ ಕುಮಾರ್ ತಿಳಿಸಿದ್ದಾರೆ.

ಅಲ್ಲದೇ, ಎರಡು ತೆಲುಗು ರಾಜ್ಯಗಳಲ್ಲಿ ಉನ್ನತ ಹಂತದ ತರಗತಿಯ ವಿಷಯಗಳನ್ನು ಎಳೆಯದರಲ್ಲೇ ಕಲಿಸಲಾಗುತ್ತದೆ. ಇದು ತಾರ್ಕಿಕ ಆಲೋಚನೆ ಹಾಗೂ ಪರಿಕಲ್ಪನೆಯ ಕಲಿಕೆಗೆ ಅಡ್ಡಿಯಾಗುತ್ತದೆ ಎಂದವರು ತಿಳಿಸಿದ್ದಾರೆ.

ಕೋಟಾದ ಕೋಚಿಂಗ್ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳು ಪ್ರೆಷರ್ ಕುಕ್ಕರ್‌ನಲ್ಲಿ ಸಿಲುಕಿದ ಅನುಭವ ಎದುರಿಸುತ್ತಿದ್ದಾರೆ. ಇದು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತಿದೆ ಎಂಬ ಆಕ್ಷೇಪಗಳೂ ಇವೆ. ಆದರೆ, ಸಮಸ್ಯೆ ಬಗೆಹರಿಸುವ ಸೂತ್ರ ಮಾತ್ರ ಸಿಗುತ್ತಿಲ್ಲ.

ಈ ನಡುವೆಯೇ, ಕೇಂದ್ರೀಯ ವಿಶ್ವವಿದ್ಯಾನಿಲಯದ ಪ್ರವೇಶಕ್ಕೆ ಸಿ.ಯು.ಇ.ಟಿ. ಪರೀಕ್ಷೆ ಆರಂಭಿಸಲಾಗಿದೆ. ಇದಕ್ಕೂ ಸಹ ಕೋಚಿಂಗ್ ಕಾಟ ಆರಂಭವಾಗುವ ಸಾಧ್ಯತೆಗಳಿವೆ. ಇದೂ ಮಕ್ಕಳ ಮೇಲಿನ ಒತ್ತಡ ಹೆಚ್ಚಿಸಿದರೆ ಅಚ್ಚರಿ ಪಡಬೇಕಿಲ್ಲ.



## ಪ್ರಧಾನಿ ಅವಕಾಶ ನಿರಾಕರಣೆ ಖಂಡನೀಯ

**(1ನೇ ಪುಟದಿಂದ)** ಆಟವಾಡುತ್ತಿರುವ ಪ್ರವೃತ್ತಿಯನ್ನು ಖಂಡಿಸುತ್ತೇನೆ ಎಂದರು.

ಸರ್ಕಾರ ಹೇಗೆ ನಡೆಸಿಕೊಳ್ಳಬೇಕು ಎನ್ನುವುದು ನಮಗೆ ಗೊತ್ತಿದೆ. ಈಗ ಅಕ್ಕಿ ಕೊಡುತ್ತಿರುವುದು ನಮ್ಮ ಪಾಲು. ಕೇಂದ್ರದವರು ಕೊಡುತ್ತಾರೆ. ನಾವು ಸೇರಿಸಿ ಹತ್ತು ಕೆಜಿ ಕೊಡ್ತಿವಿ. ಆದರೆ, ಕೇಂದ್ರ ಸರ್ಕಾರ ಪುಕ್ಕಟೆ ಕೊಡುವ ರೀತಿ ಮಾಡುತ್ತಾ ಇರುವುದು ಸರಿಯಲ್ಲ. ಕೇಂದ್ರದ ಕೆಲವು ಸಚಿವರುಗಳು ಅದಾನಿ, ಅಂಬಾನಿ ಜೊತೆ ಬೆಳೆದವರು, ಬಡವರ ಕಷ್ಟ ಗೊತ್ತಾಗುತ್ತಿಲ್ಲ ಎಂದರು.

ಹಾಲಿನ ದರ ಹೆಚ್ಚಳ ಪ್ರಸ್ತಾವನೆ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು ದರ ಏರಿಕೆ ಬಗ್ಗೆ ಅದು ಏರಿಕೆಯಾದ ನಂತರ ಮಾತನಾಡೋಣ ಪ್ರಸ್ತಾವನೆ ಸಲ್ಲಿಕೆ ಮಾಡಿದ್ದಾರೆ. ಅದು ಚರ್ಚೆಯಾಗುತ್ತದೆ. ಮುಂಚಿತವಾಗಿಯೇ ನಾವು ಏನನ್ನೂ ಹೇಳುವುದಿಲ್ಲ ಎಂದರು.

ಕೈಗಾರಿಕೆಗಳ ಬಂದ್ ಘೋಷಣೆ ವಿಚಾರದ ಬಗ್ಗೆ ಮಾತನಾಡಿದ ಸಚಿವರು, ಸಹಜವಾಗಿ ತೆರಿಗೆ ತೆಗೆದುಕೊಳ್ಳಲೇಬೇಕು. ಕೆಲವು ವಿಚಾರವಾಗಿ ಟ್ಯಾಕ್ಸ್ ಕಡಿಮೆ ಮಾಡುವುದು ಜಾಸ್ತಿ ಇದ್ದೇ ಇರುತ್ತದೆ. ಒಂದು ಕೈಯಲ್ಲಿ ಕೊಟ್ಟು ಒಂದು ಕೈಯಲ್ಲಿ ಕಿತ್ತುಕೊಳ್ಳುತ್ತಾರೆ ಎಂದು ಅವರವರ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ನಾವು ಮದ್ಯ ದರ ಏರಿಕೆ ಮಾಡಿಲ್ಲ ಎಂದರು.

ಬಿಜೆಪಿಯವರು 600 ಭರವಸೆಗಳಲ್ಲಿ 50 ಕೂಡ ಈಡೇರಿಕೆ ಮಾಡಿಲ್ಲ. ಯೋಗ್ಯತೆ ಇಲ್ಲದವರು? ಈಗ ಮಾತನಾಡುತ್ತಿದ್ದಾರೆ. ಅವರು ಎಷ್ಟು ಭರವಸೆಗಳನ್ನು ಈಡೇರಿಕೆ ಮಾಡಿದ್ದಾರೆ ಹೇಳಿ? ಎಂದು ಪ್ರಶ್ನಿಸಿದರು.


**ತಕ್ಷಣ ಬೇಕಾಗಿದ್ದಾರೆ**

ಪ್ರಸಿದ್ಧ ಸಿಮೆಂಟ್ ಕಂಪನಿಯ ಡಿಪೋದಲ್ಲಿ ಬಿಲ್ಲಿಂಗ್ ಅನುಭವವುಳ್ಳವರು ಬೇಕಾಗಿದ್ದಾರೆ.

ಅನುಭವವುಳ್ಳವರಿಗೆ ಮೊದಲ ಆದ್ಯತೆ.

ಸಂಪರ್ಕಿಸಿ :

ಫೋ : 98450 53213, 85087 77555

Maganur Basappa Public Trust, Davangere.

**Smt. Sarvamangalamma Maganur Basappa College of Education**

Basava Mantapa, T.B. Exten., Davangere.

Ph. : 08192 260466

**WALK IN INTERVIEW**

Applications are invited from the qualified Candidates for the following Posts

| Sl.No. | Name of the Post | Qualification | No.of Posts |
|---|---|---|---|
| 01 | Lecturers in History, Kannada | BA., MA., MEd., (History, Kannada) | 01 |
| 02 | Lecturers in History, English | BA., MA., MEd (Hisory, English) | 01 |
| 03 | Lecturers in Physics, Maths | BSc, MSc, MEd (PCM) | 01 |
| 04 | Librarian | Blib, MLib., MLib Sci | 01 |

**Date of Interview : 23.06.2023 Friday**

**Venue : College Premises**

Note : 1) The Candidates have to produce all the original testimonials at the time of Interview.
2) No TA/DA will be paid.

Sd/- Secretary

## ದಾವಣಗೆರೆ ವಿವಿಯಲ್ಲಿ ಇಂದು ರೈತರಿಗೆ ಪುನಶ್ಚೇತನ ತರಬೇತಿ

ಜಲ ಸಂಪನ್ಮೂಲ ಇಲಾಖೆಯ ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ) ವತಿಯಿಂದ ಭದ್ರಾ ಅಚ್ಚುಕಟ್ಟು ಪ್ರದೇಶದ ನೀರು ಬಳಕೆದಾರರ ಸಹಕಾರ ಸಂಘದ ಪದಾಧಿಕಾರಿಗಳಿಗೆ ಹಾಗೂ ಸದಸ್ಯರುಗಳಿಗೆ ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು ಇಂದು ಏರ್ಪಡಿಸಲಾಗಿದೆ.

ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದ ಹೊಸ ಸಮಾಜ ವಿಜ್ಞಾನ ಕಟ್ಟಡದಲ್ಲಿ ಬೆಳಿಗ್ಗೆ 10 ಗಂಟೆಗೆ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ನೀರು ನಿರ್ವಹಣೆಯ ವಿವಿಧ ವಿಷಯಗಳ ಕುರಿತು ರೈತರೊಂದಿಗೆ ಸಂವಾದ ನಡೆಯಲಿದೆ. ವಾಲ್ಮಿ ಸಮಾಲೋಚಕ ಸುರೇಶ ಕುಲಕರ್ಣಿ ಅವರು ನೀರು ಬಳಕೆದಾರರ ಸಹಕಾರ ಸಂಘಗಳ ರಚನೆ, ಕಾನೂನು, ಕಾಯ್ದೆಗಳು ಹಾಗೂ ಸಂಘಗಳ ಬಲವರ್ಧನೆ ಕುರಿತು ಮಾತನಾಡಲಿದ್ದಾರೆ.

ವಾಲ್ಮಿ ಸಹಪ್ರಾಧ್ಯಾಪಕ ಬಿ.ಎಚ್.ಪೂಜಾರ ವಾರಾಬಂದಿ ಹಾಗೂ ನೀರು ನಿರ್ವಹಣೆ ಕುರಿತು, ಸಮಾಲೋಚಕ ವಿ.ಐ.ಬೆಣಗಿ ಅವರು ವಿವಿಧ ಬೆಳೆಗಳ ನಿರ್ವಹಣೆ ಹಾಗೂ ಮಣ್ಣು ಮತ್ತು ಬೆಳೆಗಳ ಸಂರಕ್ಷಣೆ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕಾರ್ಯಕ್ರಮ ಸಂಯೋಜಕ ವಾಲ್ಮಿ ಸಹ ಪ್ರಾಧ್ಯಾಪಕ ಹನುಮಂತಪ್ಪ, ಸಹಸಂಯೋಜಕ ಫಕ್ಕೀರೇಶ ಅಗಡಿ ತಿಳಿಸಿದ್ದಾರೆ.

## ಚಾಣುಕ್ಯ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರ



ದಾವಣಗೆರೆ, ಜೂ.22- ನಗರದ ಚಾಣಕ್ಯ ಪದವಿ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ವಿಶೇಷ ಕಾರ್ಯಾಗಾರದಲ್ಲಿ ಧಾರವಾಡದ ಕಿಶೋರ್ ಅವರು ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮಾಹಿತಿ ನೀಡಿದರು. ಚಿತ್ರದಲ್ಲಿ ಕಾಲೇಜಿನ ಪ್ರಾಚಾರ್ಯ ರಾಜಶೇಖರ್, ಬಿ.ಆರ್.ಟಿ. ಸ್ವಾಮಿ, ಅಮರೇಶ್ ಹಾಗೂ ದಾವಣಗೆರೆ ಜ್ಞಾನಕಾಶಿ ಸಂಸ್ಥೆಯ ಬಸವನಗೌಡ ಇವರಿದ್ದಾರೆ.

## ಮಲೇಬೆನ್ನೂರಿನಲ್ಲಿ 26 ಕ್ಕೆ 'ಬೋಗಸೆ ಭತ್ತ ಬೀಜ ಪ್ರದಾನ' ಕಾರ್ಯಕ್ರಮ

ಹರಿಹರ, ಜೂ. 22- ಹರಿಹರ ತಾಲ್ಲೂಕಿನ ಮಲೇಬೆನ್ನೂರು ಗ್ರಾಮದಲ್ಲಿ ಕೃಷಿ ಪ್ರಯೋಗ ಪರಿವಾರ, ಶರಣ ಮುದ್ದಣ್ಣ ಸಾವಯವ ಕೃಷಿ ಪರಿವಾರ, ಶ್ರೀ ವೀರಭದ್ರೇಶ್ವರ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಇದೇ ದಿನಾಂಕ 26 ರ ಸೋಮವಾರ ಸಂಜೆ 4 ಗಂಟೆಗೆ ಮಲೇಬೆನ್ನೂರಿನ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ 'ಬೊಗಸೆ ಭತ್ತ ಬೀಜ ಪ್ರದಾನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕೊಲ್ಲಾಪುರ ಸಮೀಪದ ಕನ್ನೇರಿ ಮಠದ ಪೀಠಾಧಿಪತಿಗಳಾದ ಶ್ರೀ ಅದೃಶ್ಯ ಕಾಡ ಸಿದ್ದೇಶ್ವರ ಸ್ವಾಮಿಗಳು ವಹಿಸಲಿದ್ದಾರೆ.

ಭತ್ತದ ಭವಿಷ್ಯ ಉಳಿಸುವ ಈ ಮಹತ್ವದ ಕಾರ್ಯಕ್ರಮದಲ್ಲಿ ಆಸಕ್ತರು ಭಾಗವಹಿಸಿ, ಭತ್ತದ ಬೀಜವನ್ನು ಪಡೆದು ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆಸಿ, ಉಳಿಸಬೇಕಾಗಿದೆ ಎಂದು ಆಯೋಜಕರು ಕೋರಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಹನುಮಂತಗೌಡ (9901321997), ಸುಜಿತ್ ಕುಮಾರ್ (9481359206) ಇವರನ್ನು ಸಂಪರ್ಕಿಸಬಹುದು.

## ಜಿಲ್ಲಾ ಮಹಿಳಾ ಗಾಣಿಗರ ಸಮಾಜದಿಂದ ಯೋಗ ದಿನಾಚರಣೆ



ದಾವಣಗೆರೆ, ಜೂ. 22 -ಜಿಲ್ಲಾ ಮಹಿಳಾ ಗಾಣಿಗರ ಸಮಾಜದ ವತಿಯಿಂದ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಸುಶೀಲಾ ಬಸವರಾಜ ಅವರು ಯೋಗದಿಂದ ಆಗುವ ಉಪಯೋಗಗಳ ಬಗ್ಗೆ ಮಾತನಾಡಿದರು. ಶ್ರೀಮತಿ ಪ್ರಭಾ ಜಯದೇವಪ್ಪ, ಲೀಲಾ ಮತ್ತು ಭಾರತಿ ಅವರುಗಳು ಯೋಗಾಸನ ಮಾಡಿ ಅದರಿಂದ ಆಗುವ ಉಪಯೋಗದ ಬಗ್ಗೆ ವಿವರ ನೀಡಿದರು. ಗಾಣಿಗರ ಸಮಾಜದ ಗೌರವ ಅಧ್ಯಕ್ಷ ಡಾ. ಜಿ.ಸಿ. ಬಸವರಾಜ್, ಉಪಾಧ್ಯಕ್ಷ ಡಾ. ಜೈದೇವಪ್ಪ, ಗಾಣಿಗ ಸಮಾಜದ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಉಮಾ ವೀರಭದ್ರಪ್ಪ ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ.11- ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ (ನೇಕಾರ) ಯುವಕರ ಸಂಘದಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ.80 ರಷ್ಟು ಅಂಕಗಳಿಸಿ ಉತ್ತೀರ್ಣರಾದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಸಮಾಜದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಇದೇ ದಿನಾಂಕ 25 ಅಂತಿಮ ದಿನ. ವಿವರಕ್ಕೆ ಸಂಪರ್ಕಿಸಿ : 98866 14722.

## ಓದುಗರ ಪತ್ರ

### ಉಚಿತ ಬಸ್ ಪ್ರಯಾಣ ; ದಿನಂಪ್ರತಿ ಸಂಚರಿಸುವ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಸ್ಥಳಾವಕಾಶದ ಕೊರತೆ

ಮಾನ್ಯರೇ,

ಇತ್ತೀಚಿಗೆ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿಗಳಲ್ಲಿ ಒಂದಾದ ರಾಜ್ಯದ ಸರ್ಕಾರಿ ಬಸ್ಸಿನಲ್ಲಿ ಎಲ್ಲಾ ಮಹಿಳೆಯರಿಗೆ ಉಚಿತ ಪ್ರಯಾಣ ಸರಿಯಷ್ಟೇ. ಆದರೆ, ಬಸ್ಸಿನಲ್ಲಿ ನಿರೀಕ್ಷೆಯಂತೆ ಹೆಚ್ಚು ಮಹಿಳೆಯರು ಜೂನ್ 14 ರಿಂದ ಪ್ರಯಾಣಿಸುತ್ತಿದ್ದು, ಇದರಿಂದ ಪುರುಷರಿಗೆ, ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ದಿನಂಪ್ರತಿ ಸಂಚರಿಸುವ ಮಹಿಳೆಯರಿಗೆ ಬಸ್ಸಿನಲ್ಲಿ ಸ್ಥಳಾವಕಾಶದ ಕೊರತೆಯಿಂದ ಸಮಸ್ಯೆ ಎದುರಾಗಿದೆ.

ಬಸ್ಸಿನಲ್ಲಿ ಪ್ರಯಾಣಕ್ಕಾಗಿ ನೂಕುನುಗ್ಗಲು ಸಾಮಾನ್ಯ ಎನಿಸಿದೆ. ಈ ನೂಕುನುಗ್ಗಲಿಗೆ ಹಾವೇರಿ ಜಿಲ್ಲೆಯ ಓರ್ವ ಪ್ರೌಢಶಾಲಾ ವಿದ್ಯಾರ್ಥಿನಿ ಸಾವಿಗೆ ಬಲಿಯಾದ ವರದಿ ತಡವಾಗಿ ಸುದ್ದಿಯಾಗಿದೆ. ಸರ್ಕಾರಿ ಬಸ್ಸಿನಲ್ಲಿ ರಾಜ್ಯದ ಎಲ್ಲಾ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಒದಗಿಸಿ, ಬಾಡಿಗೆ ಆಟೋರಿಕ್ಷಾ ಚಾಲಕರಿಗೆ ದುಡಿಮೆ ಇಲ್ಲದಂತಾಗಿದೆ. ಅನಾವಶ್ಯಕ ವಾಗಿ ಮಹಿಳೆಯರು ಸರ್ಕಾರಿ ಬಸ್ಸಿನಲ್ಲಿ ಸಂಚರಿಸುವುದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಿ, ಶಾಲಾ-ಕಾಲೇಜು, ಕಛೇರಿ -ಕೋರ್ಟ್‌ಗಳಿಗೆ ಸಮಯಕ್ಕೆ ಸರಿಯಾಗಿ ಹೋಗುವವರಿಗೆ ಸರ್ಕಾರಿ ಬಸ್ಸಿನ ಪ್ರಯಾಣ ಕಿರಿಕಿರಿ ಎನಿಸಿದೆ. ನಿರೀಕ್ಷೆಗಿಂತ ಹೆಚ್ಚು ಪ್ರಯಾಣಿಕರು ಪ್ರಯಾಣಿಸುವುದರಿಂದ ಹೆಚ್ಚುವರಿ ಸರ್ಕಾರಿ ಬಸ್ ಸೇವೆ ಒದಗಿಸಿರಿ. ಹೆಚ್ಚುವರಿ ಪ್ರಯಾಣಿಕರು ಬಸ್ಸಿನಲ್ಲಿ ಸಂಚರಿಸುವುದರಿಂದ ಚಾಲಕನ. ನಿರ್ಲಕ್ಷ್ಯ ಅಥವಾ ಬಸ್ಸಿನ ಯಾಂತ್ರಿಕ ತೊಂದರೆಯಿಂದ Over Load ನಿಂದ ಆಕಸ್ಮಿಕವಾಗಿ ಅಪಘಾತ ಸಂಭವಿಸುವ ಸಾಧ್ಯತೆಗಳು ಎದುರಾಗಬಹುದು.

- ಜೆ.ಎಸ್. ಚಂದ್ರನಾಥ , ನೀಲಾನಹಳ್ಳಿ.

# ಜೀವಾತ್ಮ ಭಾವದಿಂದ ಪರಮಾತ್ಮ ಭಾವದೊಂದಿಗೆ ಕೂಡುವುದೇ ಯೋಗ



ದಾವಣಗೆರೆ, ಜೂ.22- ನಮ್ಮ ಸ್ವಭಾವಕ್ಕೆ ತಕ್ಕಂತೆ ನಾವು ಯೋಗ, ಧ್ಯಾನ ಮತ್ತು ಭಕ್ತಿ ಯೋಗ ಮಾರ್ಗವನ್ನು ಅನುಸರಿಸಬಹುದು. ಯೋಗದ ನಿಜವಾದ ಅರ್ಥ ನಮ್ಮ ಜೀವಾತ್ಮ ಭಾವದಿಂದ ಪರಮಾತ್ಮ ಭಾವದೊಂದಿಗೆ ಕೂಡುವುದೇ ಯೋಗ ಮಾರ್ಗವಾಗಿದೆ ಎಂದು ನಗರದ ಶ್ರೀ ರಾಮಕೃಷ್ಣ ಮಿಷನ್ ಆಶ್ರಮದ ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್ ವಿಶ್ಲೇಷಿಸಿದರು.

ನಗರದ ಆದರ್ಶ ಯೋಗ ಪ್ರತಿಷ್ಠಾನದ ಶ್ರೀ ಮಹಮಾಯಿ ವಿಶ್ವಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದಲ್ಲಿ ನಿನ್ನೆ ಏರ್ಪಾಡಾಗಿದ್ದ 9ನೇ ಅಂತಾರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಗಳು 'ನಿತ್ಯ ಜೀವನದಲ್ಲಿ ಯೋಗ ಮತ್ತು ಧ್ಯಾನದ ಅವಶ್ಯಕತೆ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಯೋಗ ಎನ್ನುವ ಪದ ತುಂಬಾ ಅಗಾಧವಾಗಿದ್ದು, ಹಲವು ಅರ್ಥವನ್ನು ಕೊಡಬಲ್ಲದು. ಇವುಗಳಲ್ಲಿ 4 ಯೋಗ ಮಾರ್ಗಗಳು ನಮ್ಮ ಜೀವನಕ್ಕೆ ಹತ್ತಿರವಾದವುಗಳು, ಜ್ಞಾನ ಯೋಗ, ಭಕ್ತಿಯೋಗ, ರಾಜಯೋಗ, ಕರ್ಮಯೋಗಗಳಿಂದ ನಾವು ಸಾಧನೆಯ ಮಾರ್ಗವನ್ನು ಸಾಧಿಸಬಹುದು ಎಂದರು.

ಭಕ್ತಿ ಯೋಗದಿಂದ ಭಗವಂತನೊಂದಿಗೆ ಸುಲಭವಾಗಿ ಶರಣಾಗತಿ ಭಾವವನ್ನು ಹೊಂದಬಹುದು. ನಾವು ದೇವರಲ್ಲಿ ನಂಬಿಕೆ ಇಡದಿದ್ದರೂ ಪರವಾಗಿಲ್ಲ. ನಮ್ಮಲ್ಲಿ ನಾವು

### ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್ ವಿಶ್ಲೇಷಣೆ

ನಂಬಿಕೆ ಇಡಬೇಕು. ಈ ಭಾವದಿಂದ ನಾವು ಪರಮಾತ್ಮನಲ್ಲಿ ಸಮರ್ಪಣೆ ಮಾಡಿಕೊಳ್ಳಬಹುದು ಎಂದು ಹೇಳಿದರು.

ನಮ್ಮ ಒಳಗಿರುವ ಬೇಕು-ಬೇಡಗಳನ್ನು ಗಮನಿಸಿ ಶಾಂತ ಮನಸ್ಸಿನಿಂದ ಯೋಚಿಸಿ, ಧ್ಯಾನಿಸಿದಾಗ ಮನಸ್ಸು ಹಗುರವಾಗುತ್ತದೆ. ಯಾವಾಗ ನಮ್ಮೊಳಗಿರುವ ಬಹುದೊಡ್ಡದಾದ 'ಅಹಂ' ಅನ್ನು ಬಿಟ್ಟು ಯೋಚಿಸಿದಾಗ ಮನಸ್ಸು ಪ್ರಫುಲ್ಲಗೊಳ್ಳುತ್ತದೆ. ಇದು ಧ್ಯಾನದಲ್ಲಿ ಸಾಧ್ಯವಾಗುತ್ತದೆ ಎಂದು ಶ್ರೀಗಳು ಪ್ರತಿಪಾದಿಸಿದರು.

ಯೋಗ ಗುರು ರಾಘವೇಂದ್ರ ಗುರೂಜಿಯವರು ಶ್ರೀಗಳಿಗೆ ಗೌರವಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮಕ್ಕೆ ಸಹಕರಿಸಿದ ಹಣಕಾಸು ವ್ಯವಹಾರ ಸಲಹೆಗಾರ ಹೆಚ್. ಮಂಜುನಾಥ್, ಬಾಳೆಎಲೆ ವ್ಯಾಪಾರಿ ರುದ್ರೇಶ್ ಅವರನ್ನು ಗೌರವಿಸಲಾಯಿತು.

ಅಂದವಾಗಿ ರಂಗೋಲಿ ಬಿಡಿಸಿದ ಶ್ರೀಮತಿ ಭಾಗ್ಯ, ಅಕ್ಷತಾ ಮತ್ತು ಶೋಭಾ ಅವರನ್ನು ಅಭಿನಂದಿಸಿದರು. ಸಹಕರಿಸಿದ ಮುಖೇಶ್ ದೇವ್ ಮತ್ತು ಪ್ರಶಾಂತ್ ಎಂ. ಎಂ. ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಯೋಗ ಶಿಕ್ಷಕ ವಿ. ಲಲಿತ್‌ಕುಮಾರ್ ಜೈನ್ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ವಿಶ್ವನಾಥಯ್ಯ, ಶ್ರೀಮತಿ ಭಾಗ್ಯ, ಬೇಬಿ ಪವಿಕಾ ಮತ್ತಿತರರು ಭಾಗವಹಿಸಿದ್ದರು.

## ನಾಳೆ ಇಪಿಎಸ್-95 ನಿವೃತ್ತ ಪಿಂಚಣಿದಾರರ ರಾಜ್ಯ ಮಟ್ಟದ ಸಮಾವೇಶ

ದಾವಣಗೆರೆ, ಜೂ.22- ಬೆಂಗಳೂರಿನ ರಾಜಾಜಿ ನಗರದ ಶ್ರೀರಾಮ ಮಂದಿರ ಮೈದಾನದಲ್ಲಿ ನಾಡಿದ್ದು ದಿನಾಂಕ 24ರ ಶನಿವಾರ ಬೆಳಿಗ್ಗೆ ರಾಷ್ಟ್ರೀಯ ಸಂಘರ್ಷ ಸಮಿತಿ ಇಪಿಎಸ್-95 ನಿವೃತ್ತ ಪಿಂಚಣಿದಾರರ ರಾಜ್ಯ ಮಟ್ಟದ ಸಮಾವೇಶ ಜರುಗಲಿದೆ.

ರಾಷ್ಟ್ರೀಯ ಸಂಘರ್ಷ ಸಮಿತಿ ಅಧ್ಯಕ್ಷ ಕಮಾಂಡರ್ ಅಶೋಕ್ ರಾವತ್, ಕಾರ್ಯದರ್ಶಿ ವೀರೇಂದ್ರ ಸಂಗ್ ಮತ್ತು ರಾಜ್ಯ ನಾಯಕರು ಭಾಗವಹಿಸಲಿದ್ದಾರೆ.

ನಾವು ಪಿಂಚಣಿದಾರರು ಕಷ್ಟಪಟ್ಟು ದುಡಿದ ಬೆವರಿನ ಸಂಬಳದ ಹಣದಲ್ಲಿ ಶೇ.8.33 ಹಿಡಿದುಕೊಂಡು ಅದಕ್ಕೆ ಅಲ್ಪ ಪ್ರಮಾಣದ ಭಿಕ್ಷೆಯ ರೂಪದಲ್ಲಿ ಪಿಂಚಣಿ ಇಲಾಖೆಯು 500 ರೂ. 800 ರೂ, 1000 ರೂ. ನೀಡುತ್ತಿದೆ. ವಿಧವೆಯರಿಗೆ ಅದರ ಅರ್ಧ ಪಿಂಚಣಿ ಕೊಡುತ್ತಿದೆ. ಇದನ್ನು ವಿರೋಧಿಸಿ, ಅನೇಕ ವರ್ಷಗಳಿಂದ ಹೋರಾಟ ಮಾಡಲಾಗುತ್ತಿದೆ. ನಮ್ಮ ಪರ ಸರ್ವೋಚ್ಛ ನ್ಯಾಯಾಲಯ ನೀಡಿರುವ ತೀರ್ಪನ್ನೂ ಸಹ ಪಿಂಚಣಿ ಇಲಾಖೆ ತಿರಸ್ಕರಿಸುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರವೂ ಸ್ಪಂದಿಸುತ್ತಿಲ್ಲ.

ನಮ್ಮಿಂದ ಲಕ್ಷಗಟ್ಟಲೇ ಹಣ ಪಡೆದು, ನಮಗೆ ನೀಡುತ್ತಿರುವ ಪಿಂಚಣಿ ಒಂದು ಸಲದ ಔಷಧಕ್ಕೂ ಸಾಲುತ್ತಿಲ್ಲ. ದೇಶದಲ್ಲಿ 80 ರಿಂದ 85 ಲಕ್ಷ ಪಿಂಚಣಿದಾರರಿದ್ದಾರೆ.

ಈ ಸಮಾವೇಶದಲ್ಲಿ ಜಿಲ್ಲೆಯ ಪಿಂಚಣಿದಾರರು ಆಗಮಿಸುವಂತೆ ಜಿಲ್ಲಾ ಸಮಿತಿ ಸಂಯೋಜಕ ಎಂ. ಶಾಂತಪ್ಪ, ಕೆ.ಎಂ.ಮರುಳಸಿದ್ದಯ್ಯ, ಟಿ.ಎಂ. ವಿಶ್ವನಾಥಯ್ಯ ತೌಡೂರು, ನಾರಾಯಣ ಸಿಂಧೆ, ಟಿ. ಮಂಜುನಾಥ ಪುಟಗನಾಳ್, ಪಿ.ರಾಜಾಸಾಬ್ ಮತ್ತು ಕೆ.ಎಸ್.ಪಾಟೀಲ್ ಕೋರಿದ್ದಾರೆ.

## ಯೋಗ - ಧ್ಯಾನಕ್ಕೂ ಆದ್ಯತೆ ನೀಡಬೇಕು



ದಾವಣಗೆರೆ, ಜೂ. 22- ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಹಾಗೂ ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಪ್ರೌಢ ಶಾಲೆ ಆವರಣದಲ್ಲಿ ಒಂಭತ್ತನೆಯ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಅಧ್ಯಕ್ಷ ಎಚ್. ಬಸವರಾಜಪ್ಪ ಮಾತನಾಡಿ, ಪ್ರತಿನಿತ್ಯ ಶಾಲಾ ಮಕ್ಕಳಿಗೆ ಆಟ-ಪಾಠದ ಜೊತೆಗೆ ಯೋಗ-ಧ್ಯಾನದ ಬಗ್ಗೆ ತಿಳಿಸಿಕೊಡಬೇಕು. ಮನೆಯಲ್ಲಿ ಪ್ರತಿಯೊಬ್ಬರೂ ಸ್ವಲ್ಪ ಹೊತ್ತು ಯೋಗ-ಧ್ಯಾನ ಮಾಡುವುದರಿಂದ ಆರೋಗ್ಯಕ್ಕೆ ಹಾಗೂ ಮನಸ್ಸಿಗೆ ಸಮಾಧಾನ ಎಂದು ತಿಳಿಸಿದರು.

## ಉದ್ದೇಶ ಪೂರ್ವಕ ಬಾಕಿದಾರರಿಗೆ ಇತ್ಯರ್ಥ ಅವಕಾಶ

### ಆರ್.ಬಿ.ಐ. ಕ್ರಮಕ್ಕೆ ಸಿಪಿಐ ಆಕ್ಷೇಪ

ನವದೆಹಲಿ, ಜೂ. 22 – ಉದ್ದೇಶ ಪೂರ್ವಕವಾಗಿ ಸಾಲ ಬಾಕಿದಾರರಾಗಿರುವವರಿಗೆ ಒಂದು ಬಾರಿ ಸಾಲ ಇತ್ಯರ್ಥದ ಅವಕಾಶ ನೀಡಿರುವ ರಿಸರ್ವ್ ಬ್ಯಾಂಕ್ ಕ್ರಮ ಹಣಕಾಸು ಅಸ್ಥಿರತೆಗೆ ಕಾರಣವಾಗಲಿದೆ ಎಂದು ಸಿ.ಪಿ.ಐ. ಸಂಸದ ಬಿನಯ್ ವಿಶ್ವಂ ಹೇಳಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿರುವ ವಿಶ್ವಂ, ಉದ್ದೇಶಪೂರ್ವಕವಾಗಿ ಸಾಲ ಬಾಕಿ ಉಳಿಸಿಕೊಂಡವರಿಗೆ ಈ ರೀತಿಯ ಅವಕಾಶ ನೀಡುವುದು ಸಾಲ ಉತ್ತರಾಧಿಕಾರತ್ವದ ಮೂಲ ತತ್ವಗಳನ್ನೇ ಬದಿಗೊತ್ತಿದಂತೆ ಎಂದಿದ್ದಾರೆ. ಇದರಿಂದ ನಮ್ಮ ಬ್ಯಾಂಕಿಂಗ್ ವ್ಯವಸ್ಥೆ ಬಗ್ಗೆ ಜನರು ಹೊಂದಿರುವ ನಂಬಿಕೆಗೆ ಧಕ್ಕೆಯಾಗುತ್ತದೆ. ಸಾಲ ಬಾಕಿ ಹೊಂದಿದರೂ ರಕ್ಷಣೆ ಸಿಗುತ್ತದೆ ಎಂಬ ಭಾವನೆ ಬರುತ್ತದೆ. ನಿಜವಾ ಗಿಯೂ ಹಣಕಾಸು ಸಂಕಷ್ಟ ಎದುರಿಸು ತ್ತಿರುವವರು ಹಾಗೂ ಉದ್ದೇಶಪೂರ್ವ ಕವಾಗಿ ಸಾಲ ಬಾಕಿ ಉಳಿಸಿಕೊಂಡವರ ನಡುವಿನ ವ್ಯತ್ಯಾಸವನ್ನು ಪರಿಗಣಿಸಲಾಗುತ್ತಿಲ್ಲ ಎಂದು ಆಕ್ಷೇಪಿಸಿದ್ದಾರೆ. ಸುಲಭವಾಗಿ ನುಣುಚಿಕೊಳ್ಳುವ ಅವಕಾಶ ನೀಡುವುದರಿಂದ, ಪ್ರಾಮಾಣಿಕವಾಗಿ ಸಾಲ ಬಾಕಿ ಪಾವತಿಸುತ್ತಿರುವವರಿಗೆ ತೊಂದರೆಯಾಗುತ್ತದೆ. ಹೀಗಾಗಿ ರಿಸರ್ವ್ ಬ್ಯಾಂಕ್ ನೀತಿಯನ್ನು ಮರು ಪರಿಶೀಲಿಸಬೇಕು ಎಂದವರು ಒತ್ತಾಯಿಸಿದ್ದಾರೆ.

## ಲಕ್ಷ್ಮಿ ಕ್ರೆಡಿಟ್ ಕೊ-ಆಪರೇಟಿವ್ ಸೊಸೈಟಿಗೆ ಚುನಾವಣೆ ಠೇವಣಿದಾರರ ಸಂಘದ ವಿರೋಧ

ದಾವಣಗೆರೆ, ಜೂ.22- ನಗರದ ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಕೋಟಿಗಟ್ಟಲೇ ಹಣವನ್ನು ಠೇವಣಿದಾರರಿಗೆ ಮೋಸ ಮಾಡಿದ್ದು, ಸಿಐಡಿ ಪೊಲೀಸರಿಂದ ತನಿಖೆ ನಡೆಯುತ್ತಿದ್ದರೂ ಇದ್ದಕ್ಕಿದ್ದಂತೆ ಸಹಕಾರ ಇಲಾಖೆ ಚುನಾವಣೆ ಘೋಷಣೆ ಮಾಡಿರುವುದು ಸಮಂಜಸವಲ್ಲ ಎಂದು ಸೊಸೈಟಿ ಠೇವಣಿದಾರರ ಸಂಘ ದೂರಿದೆ.

ಈಗಾಗಲೇ ಕಳೆದ 10ರಿಂದ ಚುನಾವಣಾ ಪ್ರಕ್ರಿಯ ಆರಂಭವಾಗಿದ್ದು, ಇದೇ ದಿನಾಂಕ 25ರಂದು ಚುನಾವಣೆ ನಡೆಯಲಿದೆ. ಸೊಸೈಟಿಯಲ್ಲಿ ಸುಮಾರು 2000 ಜನ ಷೇರುದಾರರಿದ್ದು, ಕೇವಲ 213 ಜನ ಅರ್ಹ ಮತದಾರರ ಪಟ್ಟಿಯನ್ನು ತಯಾರಿಸಿದ್ದಾರೆ. ದುರುದ್ದೇಶದಿಂದ ಕೂಡಿರುವ ಈ ದೋಷಪೂರಿತ ಮತದಾರರ ಪಟ್ಟಿ ತಯಾರಿಸಿ ಠೇವಣಿದಾರರಿಗೆ ಮೋಸ ಮಾಡುತ್ತಿದ್ದಾರೆ ಎಂದು ಠೇವಣಿದಾರರ ಸಂಘದ ಅಧ್ಯಕ್ಷ ಎಂ.ಬಿ.ಜಗನ್ನಾಥರಾವ್ ಆರೋಪಿಸಿದ್ದಾರೆ. ಈ ಸಂಬಂಧ ವೇದಿಕೆ ಸದಸ್ಯರು ಬೆಂಗಳೂರಿನಲ್ಲಿರುವ ಸಹಕಾರ ಇಲಾಖೆ ಜಂಟಿ ನಿರ್ದೇಶಕರಿಗೆ ದೂರು ನೀಡಿರುವುದಾಗಿ ಅವರು ತಿಳಿಸಿದ್ದಾರೆ.

## ಶ್ವೇತ ಭವನದಲ್ಲಿ ಮೋದಿಗೆ ಭವ್ಯ ಸ್ವಾಗತ

### ಶಾಂತಿ, ಸ್ಥಿರತೆಗಾಗಿ ಜೊತೆಯಾಗಿ ಶ್ರಮಿಸಲು ಪ್ರಧಾನಿ ಆಶಯ



ವಾಷಿಂಗ್ಟನ್, ಜೂ. 22 – ವಿಶ್ವ ಎದುರಿಸುತ್ತಿರುವ ಸವಾಲುಗಳು ಹಾಗೂ ಹೊಂದಿರುವ ಅವಕಾಶಗಳ ಹಿನ್ನೆಲೆಯಲ್ಲಿ ಭಾರತ ಮತ್ತು ಅಮೆರಿಕಗಳು ಜೊತೆಯಾಗಿ ಕಾರ್ಯನಿರ್ವಹಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಹೇಳಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಶ್ವೇತಭವನದಲ್ಲಿ ಭವ್ಯ ಸ್ವಾಗತ ನೀಡಿದ ಸಂದರ್ಭದಲ್ಲಿ ಬಿಡೆನ್ ಈ ಹೇಳಿಕೆ ನೀಡಿದ್ದಾರೆ. ಮೋದಿ ಅಮೆರಿಕ ಭೇಟಿ ಸಂದರ್ಭದಲ್ಲಿ ರಕ್ಷಣೆ, ವ್ಯಾಪಾರ ಹಾಗೂ ಬಾಹ್ಯಾಕಾಶ ಸಹಕಾರಕ್ಕೆ ಸಂಬಂಧಿಸಿದಂತೆ ಹಲವಾರು ಒಪ್ಪಂದಗಳಿಗೆ ಸಹಿ ಹಾಕಲಾಗುವುದು. ಇದಕ್ಕೆ ಪ್ರತಿಕ್ರಿಯಿಸಿದ ಮೋದಿ, ಭಾರತ ಹಾಗೂ ಅಮೆರಿಕಗಳು ಜಾಗತಿಕ ಹಿತ, ಶಾಂತಿ, ಸ್ಥಿರತೆ, ಸಮೃದ್ಧತೆಗಾಗಿ ಶ್ರಮಿಸಲು ಬದ್ಧವಾಗಿವೆ ಎಂದರು. ಉಭಯ ದೇಶಗಳ ಸಮಾಜ ಮತ್ತು ಸಂಸ್ಥೆಗಳು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಆಧರಿಸಿವೆ. ಉಭಯ ದೇಶಗಳಿಗೆ ವೈವಿಧ್ಯತೆಯ ಬಗ್ಗೆ ಹೆಮ್ಮೆ ಇದೆ ಎಂದು ಹೇಳಿದರು.

## ಬಿ.ಐ.ಇ.ಟಿಯಲ್ಲಿ ಹ್ಯಾಕಥಾನ್-2023



ದಾವಣಗೆರೆ, ಜೂ. 22 - ಇಂದಿನ ದಿನಗಳಲ್ಲಿ ಕಂಪ್ಯೂಟರ್ ತಂತ್ರಜ್ಞಾನ ಬಹಳ ಮುಂದುವರೆದಿದ್ದು, ವಿವಿಧ ಕಂಪ್ಯೂಟರ್ ಭಾಷೆಗಳಾದ ಸಿ ++, ಪೈಥಾನ್, ಒರಾಕಲ್, ಜಾವಾ, C++, Pythan, Oracle, Advanced Java) ಪ್ರೋಗ್ರಾಮಿಂಗ್ ಭಾಷೆಗಳನ್ನು ವಿದ್ಯಾರ್ಥಿಗಳು ಕಲಿತು ಬಳಸುತ್ತಿರುವುದು ಸಂತೋಷದ ವಿಷಯ.

ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಮಾಹಿತಿ ತಂತ್ರಜ್ಞಾನ ವಿಭಾಗವು ಭಾರತೀಯ ತಾಂತ್ರಿಕ ಶಿಕ್ಷಣ ಸೊಸೈಟಿ, ಇಂಜಿನಿಯರ್ಸ್ ಸಂಸ್ಥೆ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಇಂಡಿಯಾ, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರ್ಸ್ ಸಂಸ್ಥೆ, ನ್ಯೂ ಏಜ್ ಇನ್ನೋವೇಶನ್ ನೆಟ್‌ವರ್ಕ್ ಸಹಯೋಗದೊಂದಿಗೆ ಕಾಲೇಜಿನಲ್ಲಿ ಹ್ಯಾಕ್ ಟೆಕ್ ಫ್ಯೂಷನ್ ಕಾರ್ಯಕ್ರಮವು ಬಿಐಇಟಿಯಲ್ಲಿ ಮೊನ್ನೆ ನಡೆಯಿತು.

ಕಾರ್ಯಕ್ರಮಕ್ಕೆ ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಅವರು ಚಾಲನೆ ನೀಡಿದರು. ಬಿಐಇಟಿ ಕಾಲೇಜಿನ ಮಾಹಿತಿ ತಂತ್ರಜ್ಞಾನದ ಮುಖ್ಯಸ್ಥರಾದ ಡಾ|| ಪೂರ್ಣಿಮಾ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹ್ಯಾಕ್ ಟೆಕ್ ಫ್ಯೂಷನ್‌ನ ತೀರ್ಪುಗಾರರಾದ ನಿಟ್ಟೆ ಮೀನಾಕ್ಷಿ, ಪ್ರಾಧ್ಯಾಪಕರಾದ ಡಾ|| ಎಂ. ವಿ. ಮನೋಜ್‌ಕುಮಾರ್ ಮತ್ತು ಪ್ರೊ. ಬಿ. ಎಸ್. ಪ್ರವೀಣಕುಮಾರ್ ಭಾಗವಹಿಸಿದ್ದರು.

ಹ್ಯಾಕ್ ಟೆಕ್ ಫ್ಯೂಷನ್ ತಾಂತ್ರಿಕ ಸ್ಪರ್ಧೆಯಲ್ಲಿ ಶಿವಮೊಗ್ಗ, ದಾವಣಗೆರೆ ಕಾಲೇಜುಗಳಿಂದ ಒಟ್ಟು 20 ತಂಡಗಳು ಭಾಗವಹಿಸಿದ್ದವು. ಇವುಗಳಲ್ಲಿ ಜಿ.ಎಂ.ಐ.ಟಿ ಕಾಲೇಜಿನ ತಂಡ ಪ್ರಥಮ ಸ್ಥಾನ, ಶಿವಮೊಗ್ಗದ ಪಿ.ಎಸ್.ಐ.ಟಿ ತಂಡ ಎರಡನೇ ಸ್ಥಾನ, ಬಿ.ಐ.ಇ.ಟಿ ಮೂರನೇ ಸ್ಥಾನ ಪಡೆದವು, ವಿಜೇತ ತಂಡಕ್ಕೆ ನಗದು ಬಹುಮಾನ ನೀಡಲಾಯಿತು.

ಕಾರ್ಯಕ್ರಮದ ಸಂಯೋಜನೆಕಾರರಾದ ಪ್ರೊ. ಬಿ.ಹೆಚ್.ಪುನೀತ್, ಡಾ|| ವಿನುತ ಹೆಚ್.ಪಿ, ಡಾ|| ಎನ್. ಎಸ್.ಪಾಟೀಲ್, ಡಾ|| ವರ್ಷಾ. ಎಮ್, ಪ್ರೊ.ರಂಜನ, ಪ್ರೊ.ಪುನೀತ್ ಎಸ್.ಪಿ, ಎಸ್. ಸಿದ್ದೇಶ್ ಕುರ್ಕಿ, ಮ್ಯಾಕ್ಸಿಮ್ ಟೆಲಿಸ್ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

## ಮಾಂಟೆಸೊರಿ ಶಾಲೆಯಲ್ಲಿ ಯೋಗ ದಿನಾಚರಣೆ



ದಾವಣಗೆರೆ, ಜೂ. 22 - ನಗರದ ಮಾಂಟೆಸೊರಿ ಶಾಲೆಯಲ್ಲಿ 9ನೇ ವಿಶ್ವ ಯೋಗ ದಿನಾಚರಣೆ ಆಚರಿಸಲಾಯಿತು. ಯೋಗದ ಹುಟ್ಟು, ಬೆಳವಣಿಗೆ ಮಹತ್ವವನ್ನು ಪತಂಜಲಿ ಯೋಗ ಕೇಂದ್ರದ ಸಿ. ನಾರಪ್ಪ ವಿವರಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪ್ರಭಾಕರ್ ಅವರು ಮಕ್ಕಳಿಂದ ಯೋಗ ಪ್ರದರ್ಶನ ಮಾಡಿಸಿದರು. ಶಾಲೆಯ ಆಡಳಿತಾಧಿಕಾರಿ ಶ್ರೀಮತಿ ಮಲ್ಲಮ್ಮ ಅವರು ಅತಿಥಿಗಳನ್ನು ಗೌರವಿಸಿದರು. ಮುಖ್ಯೋಪಾಧ್ಯಾಯ ಫರ್ಹಾನ್, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಾದ ರಶ್ಮಿ, ಕೀರ್ತನ ಮತ್ತು ಸಾನ್ವಿ ಮತ್ತಿತರರು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದರು.

## ನಗರದಲ್ಲಿ ಇಂದು ಬಿಎಸ್ಸೆನ್ನೆಲ್ ಗ್ರಾಹಕ ಶಿಕ್ಷಣ

ದಾವಣಗೆರೆ-ಚಿತ್ರದುರ್ಗ ಕಂದಾಯ ಜಿಲ್ಲೆಗಳನ್ನು ಒಳಗೊಂಡಿರುವ ಬಿಎಸ್ಸೆನ್ನೆಲ್ ದಾವಣಗೆರೆ ಟೆಲಿಕಾಂ ಡಿಸ್ಟ್ರಿಕ್ ಟೆಲಿಕಾಮ್ ಸೇವೆಗಳ ಬಗ್ಗೆ ಜಾಗೃತಿ ಮೂಡಿಸಲು ಆನ್‌ಲೈನ್ ಮೂಲಕ ಇಂದು ಸಂಜೆ 3 ರಿಂದ 5 ಗಂಟೆಯವರೆಗೆ ಗ್ರಾಹಕ ಶಿಕ್ಷಣ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಯಾವುದೇ ಪ್ರಶ್ನೆಗಳನ್ನು ಜೂ.22 ರಂದು ಮೊದಲು ಇ-ಮೇಲ್ mailto:sdecomdvg@gmail.com, sdecomdvg@gmail.com ಮೂಲಕ ಕಳುಹಿಸಬಹುದು, ಹಾಗೂ ಗೂಗಲ್ ಮೀಟ್ ಲಿಂಕ್: http://meet.google.com/jph-zqtu-bjw ಮೂಲಕ ಸಾರ್ವಜನಿಕರು ಭಾಗವಹಿಸಬಹುದು.

## ನಗರದಲ್ಲಿ ನಾಳೆ ಜಿಲ್ಲಾ ಕಾಂಗ್ರೆಸ್ ಸಭೆ

ದಾವಣಗೆರೆ, ಜೂ.22- ಜಿಲ್ಲಾ ಕಾಂಗ್ರೆಸ್ ಸಮಿತಿಯ ಎಲ್ಲಾ ಘಟಕಗಳ ಜಿಲ್ಲಾಧ್ಯಕ್ಷರ ಸಮ್ಮುಖದಲ್ಲಿ ಇದೇ ದಿನಾಂಕ 24 ಶನಿವಾರ ಬೆಳಿಗ್ಗೆ 11.30ಕ್ಕೆ ಸಭೆಯನ್ನು ನಗರದ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಕರೆಯಲಾಗಿದೆ. ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರುಗಳಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸುವುದರ ಕುರಿತು ಈ ಸಭೆ ಕರೆಯಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಬಿ.ಹೆಚ್.ವೀರಭದ್ರಪ್ಪ ಕೋರಿದ್ದಾರೆ.

## ಎಸ್ಸೆಸ್ ಜನ್ಮದಿನ: 93 ಜನರಿಂದ ಸ್ವಯಂಪ್ರೇರಿತ ರಕ್ತದಾನ



ದಾವಣಗೆರೆ,ಜೂ.22- ನಗರದ ಎಸ್. ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಎಸ್. ಎಸ್. ಆಸ್ಪತ್ರೆ ಆವರಣದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪನವರ 93ನೇ ಹುಟ್ಟುಹಬ್ಬವನ್ನು ರೋಗಿಗಳಿಗೆ ಹಣ್ಣು ವಿತರಣೆ, ನೂತನ ಡಯಾಲಿಸಿಸ್ ಯಂತ್ರಗಳ ಅನಾವರಣ, ಸ್ವಯಂಪ್ರೇರಿತ ರಕ್ತದಾನದಂತಹ ಸಮಾಜಮುಖಿ ಕಾರ್ಯಕ್ರಮ ಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

93ನೇ ವರ್ಷದ ಹುಟ್ಟುಹಬ್ಬದಂದು '93' ರಕ್ತದಾನಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದ್ದು ವಿಶೇಷವಾಗಿತ್ತು. ಈ

### ಎಸ್‌ಎಸ್.ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎಸ್ಸೆಸ್ ಜನ್ಮದಿನ ಕಾರ್ಯಕ್ರಮ

ರಕ್ತದಾನ ಶಿಬಿರದಲ್ಲಿ 65ಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ಹಿರಿಯ ವೈದ್ಯರುಗಳಾದ ಡಾ. ಶಾಂತಲಾ ಅರುಣ್ ಕುಮಾರ್, ಡಾ. ಪ್ರವೀಣ್ ಕೆ, ಡಾ. ಸಂತೋಷ್ ಬೋಸ್ಲೆ, ಡಾ.ಮೃತ್ಯುಂಜಯ ಎನ್, ಡಾ. ಪ್ರದೀಪ್ ಬಿ.ಇ, ಡಾ. ಹರೀಶ್ ಕುಮಾರ್ ವಿ.ಎಸ್ ಮತ್ತು ಶುಶ್ರೂಷಕ ಸಿಬ್ಬಂದಿಗಳು ಹಾಗೂ ಇತರೆ ಸಿಬ್ಬಂದಿಗಳು ರಕ್ತದಾನ ಮಾಡುವ ಮೂಲಕ ಇತರರಿಗೆ ಮಾದರಿಯಾದರು. ಉಪ ಪ್ರಾಂಶುಪಾಲರಾದ ಡಾ. ಶಶಿಕಲಾ ಪಿ ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ರಕ್ತದಾನ ಕಾರ್ಯಕ್ರಮ ನಡೆಯಿತು.

ತಮ್ಮ ಹುಟ್ಟು ಹಬ್ಬದ ಸಮಾರಂಭದಲ್ಲಿ ಪಾಲ್ಗೊಂಡ ಎಸ್ಸೆಸ್ ಅವರು ಕೇಕ್ ಕತ್ತರಿಸಿದರಲ್ಲದೇ, ಐದು ನೂತನ ಡಯಾಲಿಸಿಸ್ ಯಂತ್ರಗಳನ್ನು ಅನಾವರಣಗೊಳಿಸಿದರು.

ಬಾಪಿಸಂ ಆಡಳಿತ ಮಂಡಳಿ ಸದಸ್ಯ ಸಂಪಣ್ಣ ಮುತಾಲಿಕ್, ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಎಸ್ ಪ್ರಸಾದ್ ವೈದ್ಯಕೀಯ ನಿರ್ದೇಶಕ ಡಾ. ಅರುಣ್ ಕುಮಾರ್ ಎ, ನೆಫ್ರೋಲಜಿ ವಿಭಾಗದ ಮುಖ್ಯಸ್ಥ ಡಾ. ಪ್ರಮೋದ್ ಜಿ. ಆರ್. ಕಾಲೇಜು ವಿದ್ಯಾರ್ಥಿ ಸಂಘದ ಚೇರ್ಮನ್ ಡಾ. ಹರೀಶ್ ಕುಮಾರ್ ವಿ. ಎಸ್., ವಿದ್ಯಾರ್ಥಿ ಸಂಘದ ಕನ್ನಡ ಬಳಗ ವಿಭಾಗದ ಚೇರ್ಮನ್ ಡಾ. ಸಂತೋಷ್ ಬೋಸ್ಲೆ, ವಿದ್ಯಾರ್ಥಿ ಸಂಘದ ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದ ಚೇರ್ಮನ್ ಡಾ. ರಾಘವೇಂದ್ರ ಎ.ವೈ ಹಾಗೂ ಇತರರು ಉಪಸ್ಥಿತರಿದ್ದರು.

YOGI RAM
SHASHI EDUCAIONAL TRUST (R)
LALITHA IIT and NEET ACADEMY
(LALITHA PRE UNIVERSITY COLLEGE)
#67/1, LOKIKERE MAIN ROAD, DAVANGERE. KARNATAKA
FOR REGISTRATION CONTACT
7022004042 / 7022004109 / 9980629965
CREATING THE FUTURE DOCTORS ++++. 2024
ONE YEAR
LONG TERM NEET
COACHING PROGRAMME
ADMISSIONS OPEN
NEET LONG TERM BATCH
AND
NEET REPEATERS
ಡಾಕ್ಟರ್ ಆಗುವ ನಿಮ್ಮ ಕನಸಿಗೆ ಸಮರ್ಥ ಆಯ್ಕೆ
Separate Hostel Facility for Boys & Girls
CLASSES COMMENCE FROM JULY-3RD 2023




## ಹರಿಹರದಲ್ಲಿ ತಂಪೆರೆದ ಮುಂಗಾರು

ಹರಿಹರ, ಜೂ.22- ನಗರದಲ್ಲಿಂದು ಸಂಜೆ ದಿಢೀರ್ ಸುರಿದ ಮುಂಗಾರು ಮಳೆಯಿಂದಾಗಿ ನಗರದಲ್ಲಿ ವ್ಯಾಪಾರ - ವಹಿವಾಟು ಸ್ಥಗಿತಗೊಂಡಿತು ಮತ್ತು ಶಾಲಾ ಮಕ್ಕಳಿಗೆ ಮನೆಗೆ ಹೋಗುವುದಕ್ಕೆ ತೊಂದರೆ ಆಗಿದ್ದು ಕಂಡುಬಂದಿತು.

ಬಹಳ ದಿನಗಳ ನಂತರ ಮುಂಗಾರು ಮಳೆ ಬೀಳುತ್ತಿದ್ದು, ಅಷ್ಟೊಂದು ರಭಸವಾಗಿ ಇರದೇ ಭೂಮಿಯನ್ನು ತಂಪು ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟರಮಟ್ಟಿಗೆ ಮಾತ್ರ ಮಳೆ ಬೀಳುತ್ತದೆ. ಇದರಿಂದಾಗಿ ಇನ್ನೂ ಹರಿಹರದಲ್ಲಿ ಯಾವುದೇ ರೀತಿಯ ಬಿತ್ತನೆ ಕಾರ್ಯಗಳು ನಡೆಯುತ್ತಿಲ್ಲ.

ಕಾರಣ ಭೂಮಿಯಲ್ಲಿ ಬಿತ್ತನೆ ಮಾಡುವುದಕ್ಕೆ ಸತತವಾಗಿ 3-4 ದಿನಗಳ ಕಾಲ ರಭಸದಿಂದ ಮಳೆ ಬಿದ್ದು, ಭೂಮಿ ಒಳಭಾಗದಲ್ಲಿ ಹಸಿಯಾಗಿ ಇದ್ದರೆ ಮಾತ್ರ ಬಿತ್ತನೆ ಕಾರ್ಯವನ್ನು ಆರಂಭಿಸುವ ಸಾಧ್ಯತೆ ಇರುವುದರಿಂದ ಇನ್ನೂ ಆ ಮಟ್ಟದಲ್ಲಿ ಮಳೆ ಬೀಳುತ್ತಿಲ್ಲ.

ಆದರೆ, 2-3 ದಿನಗಳಿಂದ ಸ್ವಲ್ಪ ಮಟ್ಟಿಗೆ ಮಳೆ ಬಂದಿರುವುದರಿಂದ ನದಿಗೆ ನೀರು ಹರಿದುಬಂದರೆ, ಕುಡಿಯುವ ನೀರಿನ ಸಮಸ್ಯೆಗಳು ಸ್ವಲ್ಪ ಮಟ್ಟಿಗೆ ಕಡಿಮೆ ಆಗುತ್ತದೆ ಎಂಬ ನಿರೀಕ್ಷೆ ಇದೆ. ಈ ದೃಷ್ಟಿಯಿಂದ ಮಳೆ ಆಗುತ್ತಿರುವುದರಿಂದ ಸಾರ್ವಜನಿಕರು ಸಂತಸ ವ್ಯಕ್ತಪಡಿಸಿದರು.

## ದಾವಿವಿಗೆ ಇಂದು ಸಾಲುಮರದ ತಿಮ್ಮಕ್ಕ



ದಾವಣಗೆರೆ ವಿಶ್ವವಿದ್ಯಾ ನಿಲಯದ ಪರಿಸರ ಅಧ್ಯಯನ ವಿಭಾಗ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಸಹಭಾಗಿತ್ವದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ವಿಶ್ವ ಪರಿಸರ ದಿನಾಚರಣೆ ನಡೆಯಲಿದೆ.

ವಿಶ್ವವಿದ್ಯಾನಿಲಯದ ಎಂಬಿಎ ಸಭಾಂಗಣದಲ್ಲಿ ನಡೆಯುವ ಕಾರ್ಯ ಕ್ರಮದಲ್ಲಿ ಪದ್ಮಶ್ರೀ ಪುರಸ್ಕೃತ ಪರಿಸರ ಪ್ರೇಮಿ ಸಾಲುಮರದ ತಿಮ್ಮಕ್ಕ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಕುಲ ಪತಿ ಪ್ರೊ.ಬಿ.ಡಿ.ಕುಂಬಾರ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವರಾದ ಸರೋಜ ಬಿ.ಬಿ., ಪರೀಕ್ಷಾಂಗ ಕುಲಸಚಿವ ಡಾ.ಕೆ.ಶಿವಶಂಕರ, ಹಣಕಾಸು ಅಧಿಕಾರಿ ಡಿ.ಪ್ರಿಯಾಂಕ, ಪರಿಸರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿ ಪ್ರೊ. ಎಂ. ಗೋವಿಂದಪ್ಪ, ಎನ್ಎಸ್ಎಸ್ ಸಂಯೋಜನಾಧಿಕಾರಿ ಡಾ. ಅಶೋಕಕುಮಾರ ಪಾಳೇದ ಉಪಸ್ಥಿತರಿರುವರು.

# ಜುಲೈ ಮೊದಲ ವಾರ ಜಿಲ್ಲೆಯಲ್ಲಿ ಮೋಡ ಬಿತ್ತನೆ



### ತನ್ನದೇ ಗ್ಯಾರಂಟಿಗೆ ಕೋಳಿವಾಡ ಮುಹೂರ್ತ ಫಿಕ್ಸ್

ರಾಣೇಬೆನ್ನೂರು, ಜೂ.22- ತಮ್ಮ ಪಿಕೆಕೆ ಸಂಸ್ಥೆಯಿಂದ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದು, ಅವರು ಪರವಾನಿಗೆ ಕೊಡುತ್ತಲೇ ದೆಹಲಿಯಲ್ಲಿರುವ ನಮ್ಮ ಪ್ರತಿನಿಧಿ ವಿಮಾನಯಾನ ಸಂಸ್ಥೆಯಲ್ಲಿ ಒಪ್ಪಿಗೆ ಪಡೆಯಲಿದ್ದಾರೆ. ಈ ತಿಂಗಳ ಅಂತ್ಯದೊಳಗೆ ಈ ಕಾರ್ಯ ಮುಗಿಯಲಿದ್ದು, ಜುಲೈ ಮೊದಲ ವಾರ ಜಿಲ್ಲೆಯಲ್ಲಿ ಮೋಡ ಬಿತ್ತನೆ ಕೈಗೊಂಡು ಜನರಿಗೆ ನೀಡಿದ ಗ್ಯಾರಂಟಿಗಳಲ್ಲಿ ಒಂದನ್ನು ಜಾರಿ ತರುವುದಾಗಿ ರಾಣೇಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ ತಿಳಿಸಿದ್ದಾರೆ.

ಕಾಂಗ್ರೆಸ್ ನೀಡಿದ ಐದು ಗ್ಯಾರಂಟಿಗಳ ಜೊತೆಗೆ ಹಾವೇರಿ ಜಿಲ್ಲೆ ಬರ ಮುಕ್ತ ಹಾಗೂ ರಾಣೇಬೆನ್ನೂರು ಕ್ಷೇತ್ರವನ್ನ ನಿರುದ್ಯೋಗ ಮುಕ್ತ ಮಾಡುವ ಎರಡು ಗ್ಯಾರಂಟಿಗಳನ್ನು ಚುನಾವಣೆ ಸಂದರ್ಭದಲ್ಲಿ ಪ್ರಕಾಶ ಕೋಳಿವಾಡ ಹೆಚ್ಚುವರಿಯಾಗಿ ನೀಡಿದ್ದರು. ಅವುಗಳಲ್ಲಿ ಒಂದಕ್ಕೆ ಮುಹೂರ್ತ ಫಿಕ್ಸ್ ಮಾಡಿದರು.

ಅವರು ವರುಣ ದೇವನ ಅವಕೃಪೆಯಿಂದಾಗಿ ರಾಣೇಬೆನ್ನೂರು ನಗರದ ಜನತೆಗೆ ಆಗಬಹುದಾದ ಕುಡಿಯುವ ನೀರಿನ ಸಮಸ್ಯೆ ಕುರಿತು ಚರ್ಚಿಸಿದ ನಗರಸಭೆ ಸದಸ್ಯರ ಹಾಗೂ ಅಧಿಕಾರಿಗಳ ಸಭೆ ಮತ್ತು ಮುದೇನೂರ ನೀರು ಸರಬರಾಜು ಘಟಕದ ಪರಿಸ್ಥಿತಿ ವೀಕ್ಷಿಸಿ ಪತ್ರಕರ್ತರ ಜೊತೆ ಮಾತನಾಡಿದರು.

ಅಧಿಕಾರಿಗಳು ನೀಡಿದ ಮಾಹಿತಿ ಹಾಗೂ ಹೊಳೆಯ ನೀರಿನ ಮಟ್ಟ ವೀಕ್ಷಿಸಿ ರಾಣೇಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ಬರಲಾರದು, ಜೊತೆಗೆ ದಿನಾಂಕ 25ರ ನಂತರ ಮಳೆ ಬರುವ ನಿರೀಕ್ಷೆ ಸಹ ಇದೆ ಎಂದು ಆಶಯ ವ್ಯಕ್ತ ಪಡಿಸಿದ ಶಾಸಕ ಪ್ರಕಾಶ ಕೋಳಿವಾಡ ಅವರು, ಅವಶ್ಯಬಿದ್ದರೆ ಅಣೆಕಟ್ಟೆಯಲ್ಲಿರುವ ನೀರನ್ನು ತರಿಸುವ ಪ್ರಯತ್ನ ಮಾಡುವುದಾಗಿಯೂ ಒಟ್ಟಾರೆ ಎಂತಹದೆ ಸಮಸ್ಯೆ ಬಂದರೂ ಎದುರಿಸಲಾಗುವುದು ಎಂದರು.

ನಗರದಲ್ಲಿನ ಎಲ್ಲ ಕೊಳವೆ ಬಾವಿಗಳನ್ನು ದುರಸ್ತಿ ಮಾಡಿಸಿ ಅವಶ್ಯಕತೆ ಬಿದ್ದರೆ ಅವುಗಳನ್ನು ಬಳಸಿಕೊಳ್ಳುವ, ಕೆರೆಗಳಿಗೆ ನೀರು ತುಂಬಿಸಿ ಕೊಳವೆ ಬಾವಿಗಳ ನೀರಿನ ಮಟ್ಟ ಹೆಚ್ಚಿಸುವ, ಸರ್ಕಾರದ ನೀರು ಸರಬರಾಜು ಇಲಾಖೆಯಿಂದ ನಿರ್ಮಿಸಿದ ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ, ನಗರದ ವಿವಿಧೆಡೆ ಮಳೆಯಿಂದಾಗಿ ಜನರಿಗೆ ಆಗಬಹುದಾದ ತೊಂದರೆಗಳನ್ನು ನಿವಾರಿಸುವ ಕುರಿತು ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಶಾಸಕ ಪ್ರಕಾಶ ಕೋಳಿವಾಡ ಬಿಗಿ ನಿಲುವಿನ ಸೂಚನೆ ನೀಡಿದರು.

ಸದಸ್ಯರಾದ ಪುಟ್ಟಪ್ಪ ಮರಿಯಮ್ಮನವರ, ಶೇಖಪ್ಪ ಹೊಸಗೌಡ್ರ, ಪ್ರಕಾಶ ಪೂಜಾರ, ಮಲ್ಲಪ್ಪ ಅಂಗಡಿ ಗಂಗಮ್ಮ ಹಾವನೂರ, ನೂರಿ ಖಾಜಿ, ಮಾಜಿ ಸದಸ್ಯ ಬಸವರಾಜ ಹುಚ್ಚಗೊಂಡರ, ಪೌರಾಯುಕ್ತ ಎನ್.ಎಚ್.ಕುಮ್ಮಣ್ಣನವರ, ಅಭಿಯಂತರ ರವಿಕುಮಾರ, ನಿರಂತರ ನೀರು ಸರಬರಾಜು ಅಧಿಕಾರಿಗಳಾದ ಎನ್. ಸಿ. ಹಾದಿಮನಿ, ಬಿ.ಎಂ. ಪಾಟೀಲ ಮತ್ತಿತರರಿದ್ದರು.

## ದ್ವೇಷದ ರಾಜಕಾರಣ ಮಾಡದಂತೆ ತಿಳಿಸಿದ್ದೇನೆ

**ಷಾ ಭೇಟಿ ನಂತರ ಸಿಎಂ ಹೇಳಿಕೆ**

ಬೆಂಗಳೂರು, ಜೂ. 22 – ಕರ್ನಾಟಕಕ್ಕೆ ಅಕ್ಕಿ ಪೂರೈಸುವ ವಿಷಯದಲ್ಲಿ ದ್ವೇಷ ರಾಜಕಾರಣ ಮಾಡದಂತೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಗೆ ತಿಳಿಸಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಅಮಿತ್ ಷಾ ಭೇಟಿಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎಫ್.ಸಿ.ಐ ಅಕ್ಕಿ ನೀಡುವ ವಿಚಾರದಲ್ಲಿ ಒಪ್ಪಿಗೆ ಪತ್ರವನ್ನು ನೀಡಿ ಮರುದಿನವೇ ಅಕ್ಕಿ ವಿತರಣೆಯನ್ನು ರಾಜ್ಯಗಳಿಗೆ ಸ್ಥಗಿತಗೊಳಿಸಲಾಗಿದೆ. ಅಕ್ಕಿ ವಿತರಣೆ ಬಗ್ಗೆ ರಾಜಕೀಯ ಅಥವಾ ದ್ವೇಷದ ರಾಜಕಾರಣ ಮಾಡುವುದು ಬೇಡ ಎಂದು ತಿಳಿಸಿದ್ದೇನೆ ಎಂದರು. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡುವುದಾಗಿ ಅಮಿತ್ ಷಾ ಭರವಸೆ ನೀಡಿದ್ದಾರೆ ಎಂದೂ ಮುಖ್ಯಮಂತ್ರಿ ಹೇಳಿದರು.

## ಸ್ವಿಸ್ ಬ್ಯಾಂಕ್‌ಗಳಲ್ಲಿ ಭಾರತದ ಹಣ ಇಳಿಕೆ

ನವದೆಹಲಿ, ಜೂ. 22 – ಸ್ವಿಸ್ ಬ್ಯಾಂಕುಗಳಲ್ಲಿ ಭಾರತದ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಇರಿಸಿರುವ ಹಣದ ಪ್ರಮಾಣ ಶೇ.11ರಷ್ಟು ಕಡಿಮೆಯಾಗಿದೆ. ಪ್ರಸಕ್ತ ಬ್ಯಾಂಕುಗಳಲ್ಲಿ 30 ಸಾವಿರ ಕೋಟಿ ರೂ.ಗಳ ಹಣ ಇದೆ ಎಂದು ಸ್ವಿಸ್ ಕೇಂದ್ರ ಬ್ಯಾಂಕಿನ ಮಾಹಿತಿ ತಿಳಿಸಿದೆ.

ಕಳೆದ ಎರಡು ವರ್ಷಗಳಿಂದ ಸತತವಾಗಿ ಸ್ವಿಸ್ ಬ್ಯಾಂಕ್‌ನಲ್ಲಿರುವ ಭಾರತೀಯರ ಹಣ ಕಡಿಮೆಯಾಗುತ್ತಿದೆ. ಏಳು ವರ್ಷದ ಹಿಂದಿಗೆ ಹೋಲಿಸಿದರೆ, ಹಣದ ಪ್ರಮಾಣ ಶೇ.34ರಷ್ಟು ಕಡಿಮೆ ಆಗಿದೆ.

## ತುಂಗಭದ್ರಾ ಸೊಸೈಟಿ ಅಧ್ಯಕ್ಷರಾಗಿ ಶಿವಾನಂದಪ್ಪ ಆಯ್ಕೆ



ಹರಿಹರ, ಜು. 22- ನಗರದ ತುಂಗಭದ್ರಾ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಎಂ.ಶಿವಾನಂದಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಹೆಚ್. ಸುನೀತಾ ಘೋಷಣೆ ಮಾಡಿದರು.

ನಗರದ ತುಂಗಭದ್ರಾ ಕೋ ಆಪರೇಟಿವ್ ಸೊಸೈಟಿ ಆವರಣದಲ್ಲಿ ಚುನಾವಣಾ ಪ್ರಕ್ರಿಯೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಮಂಜುನಾಥ್, ನಿರ್ದೇಶಕರಾದ ಡಿ. ಹೇಮಂತರಾಜ್, ಜಿ.ಎಸ್. ಚನ್ನಬಸಪ್ಪ, ಸೈಯದ್ ಇಫ್ತಿಕಾರ್ ಆಹ್ಮದ್, ಬಿ. ಮಂಜಪ್ಪ, ಎಂ. ಹನುಮಂತಪ್ಪ, ಪಿ. ತಿಮ್ಮಣ್ಣ, ಪ್ರಕಾಶ್ ದಿವಟೆ, ಕೆ.ಬಿ. ಮಂಜುನಾಥ್, ಎಲ್.ಪಿ.ಮಮತಾ, ಎ.ಬಿ. ಗಂಗಮ್ಮ ಹಾಗೂ ವ್ಯವಸ್ಥಾಪಕ ಶರತ್ ಹಾಗೂ ಇತರರು ಹಾಜರಿದ್ದರು.

## ಹರಿಹರದ ನಾಗಭೂಷಣ, ಮಂಜಮ್ಮಗೆ ಗ್ರಾಮೀಣ ಸಿರಿ ಪ್ರಶಸ್ತಿ





ಹರಿಹರ, ಜು. 22 - ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡುವ ಗ್ರಾಮೀಣ ಸಿರಿ ಪ್ರಶಸ್ತಿಗೆ ಜೆ. ನಾಗಭೂಷಣ (ಮಲೇಬೆನ್ನೂರು) ಹಾಗೂ ಎ.ಬಿ. ಮಂಜಮ್ಮ (ಸಿರಿಗೆರೆ) ಅವರನ್ನು ಹರಿಹರ ತಾಲ್ಲೂಕಿನಿಂದ ಆಯ್ಕೆ ಮಾಡಲಾಗಿದೆ ಎಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ತಿಳಿಸಿದರು.

## ಶೈಕ್ಷಣಿಕ ಸಾಧಕಿ ಭೂಮಿಕಾಗೆ 'ಸರಸ್ವತಿ ಪುರಸ್ಕಾರ'



ದಾವಣಗೆರೆ, ಜೂ.22- ನಗರದ ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ ದಿಂದ ಶೈಕ್ಷಣಿಕ ಸಾಧಕಿ ಭೂಮಿಕಾ ಆರ್. ಪೈ ಅವರು 'ಸರಸ್ವತಿ ಪುರಸ್ಕಾರ'ಕ್ಕೆ ಆಯ್ಕೆಯಾಗಿದ್ದಾರೆ. 2022-23ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಪರೀಕ್ಷೆಯಲ್ಲಿ ಒಟ್ಟು ಅಂಕ 625 ಕ್ಕೆ 625 ಪರಿಪೂರ್ಣ ಅಂಕ ಪಡೆದು ಸಾಧನೆ ಮಾಡಿರುವ ಭೂಮಿಕಾ, ರಮೇಶ್ ಪೈ ಮತ್ತು ಶ್ರೀಮತಿ ರಮ್ಯ ರಮೇಶ್ ಪೈ ಸುಪುತ್ರಿ.

## ತಡವಾದರೂ ಈ ಬಾರಿ ಉತ್ತಮ ಮಳೆ

ಹರಪನಹಳ್ಳಿ, ಜೂ. 22 - ಬುಧ-ಶುಕ್ರದ ಮಧ್ಯ ಸೂರ್ಯನಿರುವುದರಿಂದ ಮಳೆಗೆ ಆತಂಕವಿದ್ದು, ನಾಡಿದ್ದು ದಿನಾಂಕ 24 ರಿಂದ ಬುಧಾಸ್ತನಾಗುವುದರಿಂದ ರಾಜ್ಯದ ಎಲ್ಲಾ ಭಾಗದಲ್ಲಿ ಬಿತ್ತನೆಗೆ ಸಾಕಷ್ಟು ಮಳೆಯಾಗುತ್ತೆ ಎಂದು ಹರಪನಹಳ್ಳಿ ತಾಲ್ಲೂಕು ಪುಣಬಘಟ್ಟದ ಪಿ.ಎಂ. ಬಾಲಚಂದ್ರ ಶಾಸ್ತ್ರಿ ತಿಳಿಸಿದ್ದಾರೆ.

ನಾಳೆ ದಿನಾಂಕ 23 ರಿಂದ 3, 4 ದಿನಗಳಲ್ಲಿ ರಾಜ್ಯದಲ್ಲೆಲ್ಲ ಮಳೆಯಾಗುತ್ತದೆ. ಕೆಲವು ಪಂಚಾಂಗದಲ್ಲಿ ಜೂನ್ 20 ಬುಧಾಸ್ತ ಬರೆದಿದ್ದಾರೆ. ಒಂಟಿಕೊಪ್ಪಲ್ ಪಂಚಾಂಗ ಪ್ರಕಾರ ಜೂನ್ 24 ಬುಧಾಸ್ತ ಇರುತ್ತದೆ ಪ್ರಯುಕ್ತ ಒಂದೆರಡು ದಿನ ಹಿಂದು ಮುಂದು ಆಗಬಹುದು.

'ಅಧಿಕ ಶ್ರಾವಣೇ ಅಧಿಕ ವೃಷ್ಠಿ' ಎಂಬಂತೆ ಈ ವರುಷ ಅಧಿಕ ಶ್ರಾವಣ ಬಂದಿರುವುದರಿಂದ ತಡವಾದರೂ ಹೆಚ್ಚಿನ ಮಳೆ ಆಗುತ್ತದೆ. ಪೈರು ಫಸಲು ಉತ್ತಮವಾಗಿ ಫಲಿಸುತ್ತವೆ. ರೈತರು ನೆಮ್ಮದಿಯಿಂದ ಇರುತ್ತಾರೆ.

ಗುರುವನ್ನು ಶನಿ ವೀಕ್ಷಣೆ ಮಾಡುತ್ತಿರುವುದರಿಂದ ವರ್ಷಪೂರ್ತಿ ರಾಜ್ಯವನ್ನಾಳುವವರಾಗಲೀ, ಪ್ರಜೆಗಳಾಗಲೀ ನೆಮ್ಮದಿಯಿಂದ ಇರುವುದಿಲ್ಲ. ಮುಂದೆ ಜುಲೈ ತಿಂಗಳಲ್ಲಿ ಸಿಂಹ ರಾಶಿಗೆ ಕುಜ ಬಂದಾಗ ಶನಿ ಪ್ರಭಾವ ಹೆಚ್ಚಾಗಿ ರಾಜ್ಯದಲ್ಲಿ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗುತ್ತದೆ.

## ಮಾಸಿಕ ಪಿಂಚಣಿ ಪಡೆಯಲು ಎನ್.ಪಿ.ಸಿ.ಐ ಜೋಡಣೆ ಕಡ್ಡಾಯ

ದಾವಣಗೆರೆ, ಜೂ. 19 - ಕಂದಾಯ ಇಲಾಖೆಯಿಂದ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಿಕ ಪಿಂಚಣಿ ಮತ್ತು ಸಹಾಯಧನ ಪಡೆಯುವ ಫಲಾನುಭವಿಗಳು ಕಡ್ಡಾಯವಾಗಿ ಆಧಾರ್ ಸಂಖ್ಯೆಯನ್ನು ತಮ್ಮ ಬ್ಯಾಂಕ್, ಅಂಚೆ ಉಳಿತಾಯ ಖಾತೆಗೆ ಎನ್.ಪಿ.ಸಿ.ಐ ಜೋಡಣೆ ಮಾಡಿಸಬೇಕೆಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಸಾಮಾಜಿಕ ಭದ್ರತಾ ಯೋಜನೆಗಳಾದ ವೃದ್ದಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ, ವಿಧವಾ ವೇತನ, ರೈತರ ಆತ್ಮಹತ್ಯೆ ಪ್ರಕರಣಗಳಡಿ ರೈತನ ಪತ್ನಿಗೆ ನೀಡುವ ವಿಧವಾ ವೇತನ, ಆಸಿಡ್ ಪ್ರಕರಣಗಳಡಿ ನೀಡುವ ವೇತನ, ಅಂಗವಿಕಲರ ವೇತನ, ಮನಸ್ವಿನಿ, ಮೈತ್ರಿ ಮತ್ತು ರಾಷ್ಟ್ರೀಯ ಕುಟುಂಬ ನೆರವು ಯೋಜನೆಗಳಡಿ ಜೂನ್ ರಿಂದ ಆಧಾರ್ ಆಧಾರಿತ ನೇರವಾಗಿ ಹಣ ಪಾವತಿಸುವುದರಿಂದ, ಫಲಾನುಭವಿಗಳು ಬ್ಯಾಂಕ್, ಅಂಚೆ ಕಚೇರಿಗೆ ತೆರಳಿ ತಮ್ಮ ಆಧಾರ್ ನಂಬರ್ ಅನ್ನು ಉಳಿತಾಯ ಖಾತೆಗೆ ಎನ್.ಪಿ.ಸಿ.ಐ ಜೋಡಣೆ ಮಾಡಿಸಬೇಕು. ಇಲ್ಲದಿದ್ದಲ್ಲಿ ಮುಂಬರುವ ದಿನಗಳಲ್ಲಿ ಮಾಸಿಕ ಪಿಂಚಣಿ ಮತ್ತು ಸಹಾಯಧನ ಪಡೆಯಲು ತೊಂದರೆಯಾಗುತ್ತದೆ ಎಂದು ಅವರು ತಿಳಿಸಿದ್ದಾರೆ.



Grab your S22 now at Zero Const 24 month EMI starting at 2416 Rs only. BUY NOW
AVAILABLE @
GUPTA'S SHOPPE
#19, NEW MURUGHARAJENDRA COMPLEX, OPP. DDPI OFFICE, DAVANGERE. Mob. : 90351 55455

## ಸ್ಕ್ವಾಟ್‌ನಲ್ಲಿ ಹೊಸ ದಾಖಲೆ ಬರೆದ ಪವರ್‌ಲಿಫ್ಟರ್ ಶ್ವೇತಾಗೆ ಬೆಳ್ಳಿ ಪದಕ



ದಾವಣಗೆರೆ, ಜೂ.22- ಧಾರವಾಡ ಜಿಲ್ಲಾ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ವತಿಯಿಂದ ಹುಬ್ಬಳ್ಳಿ ಶತಾಬ್ದಿ ರೈಲ್ವೆ ಭವನದಲ್ಲಿ ಜರುಗಿದ ರಾಜ್ಯಮಟ್ಟದ ಸೀನಿಯರ್ ಪವರ್‌ಲಿಫ್ಟಿಂಗ್ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ನಗರದ ಮುನ್ಸಿಪಲ್ ಸ್ಪೋರ್ಟ್ಸ್ ಕ್ಲಬ್‌ನ ಕ್ರೀಡಾಪಟು ಎನ್.ಶ್ವೇತಾ ದ್ವಿತೀಯ ಸ್ಥಾನ ಪಡೆದಿದ್ದಾರೆ.

ದೊಡ್ಡಬಾತಿ ಗ್ರಾಮದ ನಿಂಗಪ್ಪ-ಮಂಗಳಮ್ಮ ಮಡಿವಾಳರ ಪುತ್ರಿ ಶ್ವೇತಾ, ಪಂದ್ಯಾವಳಿಯಲ್ಲಿ 76 ಕೆ.ಜಿ. ವಿಭಾಗದಲ್ಲಿ ಭಾಗವಹಿಸಿ, ಸ್ಕ್ವಾಟ್‌ನಲ್ಲಿ 192.5 ಕೆ.ಜಿ., ಬೆಂಚ್ 95 ಕೆ.ಜಿ., ಡೆಡ್ ಲಿಫ್ಟ್ 125 ಕೆ.ಜಿ. ಒಟ್ಟು 410 ಕೆ.ಜಿ ಭಾರವನ್ನು ಎತ್ತುವ ಮೂಲಕ ದ್ವಿತೀಯ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ದ್ದಾರೆ. ಅಲ್ಲದೇ ಸ್ಕ್ವಾಟ್‌ನಲ್ಲಿ 192.5 ಕೆ.ಜಿ. ಎತ್ತಿ ರಾಜ್ಯದಲ್ಲಿ ಹೊಸ ದಾಖಲೆ ಮಾಡಿರುತ್ತಾರೆ. ಕೋಚ್ ಕೆ.ಜಿ.ಪ್ರವೀಣ್‌ಕುಮಾರ್ ಅಭಿನಂದಿಸಿದ್ದಾರೆ.

## ಹೆಬ್ಬಾಳು ಗ್ರಾಮದ ಶ್ರೀಮತಿ ಪಾರ್ವತಮ್ಮ ಭಗವಂತಪ್ಪ ನಿಧನ



ದಾವಣಗೆರೆ ತಾಲ್ಲೂಕು ಹೆಬ್ಬಾಳು ಗ್ರಾಮದ **ಶ್ರೀಮತಿ ಪಾರ್ವತಮ್ಮ ಭಗವಂತಪ್ಪ** ಅವರು ದಿನಾಂಕ 22-06-2023ರ ಗುರುವಾರ ಸಂಜೆ 6.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದಿನಾಂಕ 23-06-2023ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಹೆಬ್ಬಾಳು ಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ಮೊಮ್ಮಕ್ಕಳು ಮತ್ತು ಮರಿಮೊಮ್ಮಕ್ಕಳು
ಹಾಗೂ ಬಂಧು-ಮಿತ್ರರು. ಮೊ. : 84316 34587

## ದುಗ್ಗಪ್ಪ ಅವರಿಂದ ಎಸ್ಸೆಸ್ಸೆಂಗೆ ಸನ್ಮಾನ



ದಾವಣಗೆರೆ, ಜೂ. 22- ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ನಿನ್ನೆ ತಮ್ಮ ನಿವಾಸಕ್ಕೆ ಸೌಜನ್ಯದ ಭೇಟಿ ನೀಡಿದ್ದ ಸಂದರ್ಭದಲ್ಲಿ ನಗರಸಭಾ ವ್ಯಾಯಾಮ ಶಾಲೆಯ ನಿವೃತ್ತ ತರಬೇತಿದಾರ ಎಂ.ದುಗ್ಗಪ್ಪ ಮತ್ತು ಶ್ರೀಮತಿ ಲಲಿತಮ್ಮ ದಂಪತಿ ಸನ್ಮಾನಿಸಿದರು.

ದುಗ್ಗಪ್ಪನವರ ಅಣ್ಣ ಎಂ.ಕೃಷ್ಣಪ್ಪ - ಅಕ್ಕಮ್ಮ ದಂಪತಿ, ಮಗ ಡಿ. ರಮೇಶ - ಗಾಯತ್ರಿ ದಂಪತಿಗಳು ಉಪಸ್ಥಿತರಿದ್ದರು. ಹಿರಿಯ ಪತ್ರಕರ್ತ ಹಳೇಬೀಡು ರಾಮಪ್ರಸಾದ್ ಉಪಸ್ಥಿತರಿದ್ದರು.

## ರೆಸ್ಟೋರೆಂಟ್‌ನಲ್ಲಿ ಸ್ಫೋಟ : 31 ಸಾವು

ಬೀಜಿಂಗ್, ಜೂ. 22 – ಚೀನಾದ ಕ್ಸಿಂಗ್‌ಕಿಂಗ್ ಎಂಬಲ್ಲಿನ ರೆಸ್ಟೋರೆಂಟ್‌ನಲ್ಲಿ ಉಂಟಾದ ಗ್ಯಾಸ್ ಸ್ಫೋಟದಿಂದ 31 ಜನ ಸಾವನ್ನಪ್ಪಿದ್ದಾರೆ. ಅಡುಗೆ ಅನಿಲ ಸೋರಿಕೆಯಿಂದ ಈ ಅವಘಡ ಸಂಭವಿಸಿದೆ. ಏಳು ಜನ ತೀವ್ರವಾಗಿ ಗಾಯಗೊಂಡಿದ್ದಾರೆ. ಸ್ಫೋಟದಿಂದಾಗಿ ಸುತ್ತಲಿನ ಕಟ್ಟಡಗಳಿಗೂ ತೀವ್ರ ಹಾನಿಯಾಗಿದೆ.

## ಹೃದಯಪೂರ್ವಕ ಅಭಿನಂದನೆಗಳು



ಕುವೆಂಪು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರನ್ನಾಗಿ ದಾವಣಗೆರೆಯ **ಶ್ರೀಯುತ ಶಾಂತಕುಮಾರ್ ಜಿ.ಎಸ್.** ಇವರನ್ನು ಗೌರವಾನ್ವಿತ ರಾಜ್ಯಪಾಲರಾದ ತಾವರ್‌ಚಂದ್ ಗೆಹ್ಲೋಟ್ ಅವರು ನಾಮನಿರ್ದೇಶನ ಮಾಡಿ ಆದೇಶ ಹೊರಡಿಸಿದ್ದಾರೆ.
ಇವರನ್ನು ಅಭಿನಂದಿಸುತ್ತಾ ಶುಭ ಹಾರೈಸುವವರು...

- ಶ್ರೀಯುತ ವೈ.ಬಿ. ಸತೀಶ್, ಅಧ್ಯಕ್ಷರು, ಶ್ರೀಮಾತಾ ವಿದ್ಯಾಸಂಸ್ಥೆ, ದಾವಣಗೆರೆ ಹಾಗೂ ಆಡಳಿತ ಮಂಡಳಿ ಮತ್ತು ಶಿಕ್ಷಕ ವೃಂದದವರು, ನಂದಗೋಕುಲ ಶಾಲೆ, ದಾವಣಗೆರೆ.
- ಶ್ರೀಮತಿ ಅನಸೂಯ ಬಸವನಗೌಡ್ರು, ಕಾರ್ಯದರ್ಶಿ, ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ, ದಾವಣಗೆರೆ.
- ಶ್ರೀಯುತ ಬಸವಂತಪ್ಪ ಮತ್ತು ಮಕ್ಕಳು, ದಾವಣಗೆರೆ.
- ಶ್ರೀಯುತ ಪ್ರಮೋದ್ ಬಿ. ಶ್ರೀಮತಿ ನಳಿನ ಕೆ.ಬಿ., ಕು. ಶಮಿಕ್ ಗೌಡ, ದಾವಣಗೆರೆ.

## ಹೃದಯಪೂರ್ವಕ ಅಭಿನಂದನೆಗಳು



ಕುವೆಂಪು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರನ್ನಾಗಿ ದಾವಣಗೆರೆಯ **ಶ್ರೀಯುತ ಶಾಂತಕುಮಾರ್ ಜಿ.ಎಸ್.** ಇವರನ್ನು ಗೌರವಾನ್ವಿತ ರಾಜ್ಯಪಾಲರಾದ ತಾವರ್‌ಚಂದ್ ಗೆಹ್ಲೋಟ್ ಅವರು ನಾಮನಿರ್ದೇಶನ ಮಾಡಿ ಆದೇಶ ಹೊರಡಿಸಿದ್ದಾರೆ.
ಇವರನ್ನು ಅಭಿನಂದಿಸುತ್ತಾ ಶುಭ ಹಾರೈಸುವವರು...

- ಶ್ರೀಯುತ ಸೋಮಶೇಖರಪ್ಪ ಜಿ.ಹೆಚ್. ಶ್ರೀಮತಿ ವಿಜಯಮ್ಮ ಕೆ.ಎಸ್.
- ಶ್ರೀಮತಿ ಪ್ರತಿಮಾ ಶಾಂತಕುಮಾರ್, ಕು. ವಿಹಾ ಎಸ್.
- ಶ್ರೀಯುತ ಸುರೇಶ್ ಜಯ್ಯಪ್ಪ, ಶ್ರೀಮತಿ ದೀಪಾ ಜಿ.ಎಸ್. ಕು. ಸಹಿ, ಸನ್ನ.

ಕುಟುಂಬ ವರ್ಗದವರು, ಬಂಧು-ಮಿತ್ರರು.

SPACE AVAILABLE FOR RENT


Suitable for following business
Financial Institutions · Banks
Coaching Centers · Gym
Garments Showrooms
PU Colleges, Nursing Etc
Facilities available
Attractive Elevation.
Lift. · 24/7 Water Facilities
Space available
Floor 2000sft · Floor 2000sft
For contant : Vidyanagar Main Road, 17th cross, Davanagere.
Contact : 94484 28371, 94810 40582